بِسْمِ اللهِ الرَّحْمٰنِ الرَّحِيْمِ　نَحْمَدُهٗ وَنُصَلِّی عَلٰی رَسُوْلِہِ الْکَرِیْمِ　وَعَلٰی عَبْدِہِ الْمَسِیْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 47

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

25 ನವೆಂಬರ್ 2021, 25 ನಬುವ್ವತ್ 1400 ತಬ್‌ಲೀಗ್ ಹಿಜರಿ ಶಮ್‌ಸಿ,
19 ರಬೀಉಸ್ಸಾನಿ 1443 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَیِّدْ اِمَامَنَا بِرُوْحِ الْقُدُسِ
وَبَارِکْ لَنَا فِیْ عُمُرِہٖ وَاَمْرِہٖ

## ಅಲ್ಲಾಹನ ಉಪದೇಶ

وَكُنْتُ عَلَيْهِمْ شَهِيْدًا مَّا دُمْتُ فِيْهِمْ ۚ فَلَمَّا تَوَفَّيْتَنِيْ كُنْتَ اَنْتَ الرَّقِيْبَ عَلَيْهِمْ ۚ وَاَنْتَ عَلٰى كُلِّ شَيْءٍ شَهِيْدٌ

**(ಅಲ್‌ಮಾಇದಃ : 118)**

**ಅಂದರೆ: ನಾನು ಅವರೊಂದಿಗೆ ಇದ್ದ ಕಾಲದ ವರೆಗೆ ನಾನು ಅವರಿಗೆ ಸಾಕ್ಷಿಯಾಗಿದ್ದೆ. ಆದರೆ ನೀನು ನನ್ನನ್ನು ಮೃತಪಡಿಸಿದಾಗ ಅವರ ಮೇಲ್ನೋಟಗಾರನು ನೀನೇ ಆದೆ. ನೀನು ಸರ್ವ ಸಂಗತಿಗಳಿಗೂ ಸಾಕ್ಷಿಯಾಗಿರುವೆ**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

**ಎಲ್ಲಿಯವರೆಗೆ ನಾನು ನಿಮಗೆ ನಿಮ್ಮ ಪ್ರಾಣಕ್ಕಿಂತಹೆಚ್ಚು ಪ್ರಿಯನಾಗಿರುವುದಿಲ್ಲವೋ, ಅಲ್ಲಿಯವರೆಗೆ ನಿಮ್ಮ ವಿಶ್ವಾಸವು ಪರಿಪುರ್ಣವಾಗುವುದಿಲ್ಲ.**

ಹಝ್‌ರತ್ ಉಮರ್(ರ) ಕೇಳಿದರು. ಓ ನಬಿವರ್ಯರೇ! ನೀವು ನನಗೆ ಎಲ್ಲಾ ವಸ್ತುಗಳಿಂತಲೂ ಪ್ರಿಯರಾಗಿದ್ದೀರಿ. ನನ್ನ ಜೀವ ಹೊರತುಪಡಿಸಿ. ಹಝ್‌ರತ್ ರಸೂಲುಲ್ಲಾಹ್(ಸ) ನುಡಿದರು. ಇಲ್ಲ ಆ ದೇವನಾಣೆ ಅವನ ಕೈಯಲ್ಲಿ ನನ್ನ ಜೀವವಿದೆ, ಎಲ್ಲಿಯವರರೆಗೆ ನಾನು ನಿಮಗೆ ನಿಮ್ಮ ಜೀವಕ್ಕಿಂತ ಪ್ರಿಯನಾಗುವುದಿಲ್ಲವೋ ವಿಶ್ವಾಸವು ಅಲ್ಲಿಯವರೆಗೆ ಪೂರ್ಣವಾಗುವುದಿಲ್ಲ. ಹಝ್‌ರತ್ ಉಮರ್(ರ) ಮತ್ತೆ ನುಡಿದರು. ಏ ಅಲ್ಲಾಹ್! ಈಗ ನಿವು ನನ್ನ ಜೀವಕ್ಕಿಂತಲೂ ಹೆಚ್ಚು ಪ್ರಿಯರಾಗಿದ್ದೀರಿ. ಹಝ್‌ರತ್ ರಸೂಲುಲ್ಲಾಹ್(ಸ) ನುಡಿದರು. ಉಮರ್: ಈಗ ನಿನ್ನ ವಿಶ್ವಾಸ ಪರಿಪೂರ್ಣಗೊಂಡಿದೆ.

**(ಸಹೀಹ್ ಬುಖಾರಿ, ಸಂಪುಟ-3, ಕಿತಾಬುಝ್ಝುಕಾತ್, ಮುದ್ರಣ ಖಾದಿಯಾನ್ 2008)**

**ಹಝ್‌ರತ್ ರಸೂಲುಲ್ಲಾಹ್(ಸ) ನುಡಿದರು. ಹಝ್‌ರತ್ ಅಬೂಬಕರ್ ಅವರ ಶ್ರೇಷ್ಠತೆ ಅವರ ಆತ್ಮೀಯ ಗುಣಗಳಿಂದಾಗಿವೆ. ನಿಜವಾಗಿಯೂ ಹಝ್‌ರತ್ ಅಬೂಬಕರ್(ರ) ತೋರಿಸಿದಂತಹ ನಿಷ್ಠೆ ಅದ್ವಿತೀಯವಾಗಿವೆ.**

**ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ಹಝ್‌ರತ್ ಅಬೂಬಕರ್(ರ) ರವರ ಅದ್ವಿತೀಯ ನಿಷ್ಠೆ

ಹಝ್‌ರತ್ ರಸೂಲುಲ್ಲಾಹ್(ಸ) ಹಝ್‌ರತ್ ಅಬೂಬಕರ್ ಅವರಿಗೆ ಸಿದ್ದೀಖ್ (ಸತ್ಯಸಂಧರು) ಎಂಬ ಬಿರುದು ನೀಡಿದ್ದಾರೆಂದರೆ, ಅವರಲ್ಲಿ ಯಾವ ಯಾವ ರೀತಿಯ ಮಹತ್ತರ ಗುಣಗಳಿದ್ದವು ಎಂಬುದು ಅಲ್ಲಾಹನೇ ಚೆನ್ನಾಗಿ ಬಲ್ಲವನಾಗಿದ್ದಾನೆ. ಹಝ್‌ರತ್ ಅಬೂಬರಕ್ ಅವರ ಶ್ರೇಷ್ಠತೆಯು ಅವರ ಆತ್ಮೀಯ ಗುಣಗಳಿಂದಾಗಿದೆ, ನಿಜವಾಗಿಯೂ ಅಬೂಬಕರ್(ರ) ತೋರಿಸಿದಂತಹ ನಿಷ್ಠೆ ಅದ್ವಿತೀಯವಾಗಿದೆ. ಅದರ ಉದಾಹರಣೆ ಸಹ ಸಿಗುವುದು ಕಷ್ಟಕರವಾಗಿದೆ. ನಿಜ ಹೇಳಬೇಕಾದರೆ ಯಾವ ವ್ಯಕ್ತಿ ಸಿದ್ದೀಖ್‌ರಂತಹ ಶ್ರೇಷ್ಠತೆ ಪಡೆಯಬಯಸುವುದಾದರೆ ಅವರಿಗೆ ಅಬೂಬಕರ್ ಅವರಂತಹ ಗುಣಗಳನ್ನು ತನ್ನೊಳಗೆ ಅಳವಡಿಸಿಕೊಳ್ಳಬೇಕು, ಆದಷ್ಟು ಪ್ರಯತ್ನಪಡಬೇಕು ಮತ್ತು ಸಾಧ್ಯವಾದಷ್ಟು ದುಆ (ಪ್ರಾರ್ಥನೆ) ಮಾಡಬೇಕು. ಎಲ್ಲಿಯವರೆಗೆ ಅಬೂಬಕರ್‌ರವರ ಗುಣಗಳ ನೆರಳು ತನ್ನ ಮೇಲೆ ಹಾಕಿಕೊಳ್ಳುವುದಿಲ್ಲ. ಅದೇ ಬಣ್ಣ ಸ್ವೀಕರಿಸಲು ಹೋಗುವುದಿಲ್ಲ. ಅಲ್ಲಿಯವರೆಗೆ ಆ ಶ್ರೇಷ್ಠತೆ ಪಡೆಯಲಾಗದು.

### ಅಬೂಬಕರ್‌ರವರ ಗುಣಗಳೇನು?

ಅಬೂಬಕರ್‌ರವರ ಗುಣಗಳೇನಾಗಿದ್ದವು? ಅದರ ಬಗ್ಗೆ ದೀರ್ಘವಾದ ವಿವರಕ್ಕೆ ಈಗ ಸಮಯವಿಲ್ಲ, ಏಕೆಂದರೆ ಅದಕ್ಕಾಗಿ ಒಂದು ದೀರ್ಘ ಅವಧಿಯೇ ಬೇಕಾಗುತ್ತದೆ. ಸಂಕ್ಷಿಪ್ತ ರೂಪದಲ್ಲಿ ನಾನೊಂದು ಘಟನೆ ವಿವರಿಸುತ್ತೇನೆ. ಹಝ್‌ರತ್ ರಸೂಲುಲ್ಲಾಹ್(ಸ) ನುಬುವ್ವತ್ತಿನ ದಾವೆ ಹೂಡಿದಾಗ, ಹಝ್‌ರತ್ ಅಬೂಬಕರ್ ಸಿದ್ದಿಖ್(ರ) ಸಿರಿಯಾ ಕಡೆಗೆ ಹೋಗಿ ಮರಳುತ್ತಾ ಇನ್ನೂ ದಾರಿಯಲ್ಲಿಯೇ ಇದ್ದರು. ಆಗ ಒಬ್ಬ ವ್ಯಕ್ತಿಯನ್ನು ಅವರು ಭೇಟಿಯಾದಗ ಅವರೊಂದಿಗೆ ಮಕ್ಕದ ಅಹವಾಲು ಕೇಳಿದರು ತಾಜಾ ಸಮಾಚಾರ ಹೇಳಿರಿ. ಮನುಷ್ಯನೊಬ್ಬನು ಪ್ರವಾಸದಿಂದ ಮರಳಿ ಬಂದಾಗ ಊರಿನವರೊಂದಿಗೆ ಭೇಟಿಯಾದರೆ ಈ ರೀತಿ ವಿಚಾರಿಸುವುದು ಸಾಮಾನ್ಯ ಸಂಗತಿಯಾಗಿರುತ್ತದೆ. ಅವನು ಹೇಳಿದನು. ತಾಜಾ ಸಮಾಚಾರ ಎಂದರೆ ನಿಮ್ಮ ಮಿತ್ರ (ಮಹಮ್ಮದ್)(ಸ) ಪ್ರವಾದಿಯ ದಾವೆಯನ್ನು ಮಾಡಿದ್ದಾರೆ, ಅದನ್ನು ಕೇಳುತ್ತಲೇ ಹೇಳಿದರು. ಅವರು ಈ ದಾವೆಯನ್ನು ಹೂಡಿದರೆಂದರೆ ಸತ್ಯವೇ ಆಗಿದೆ. ಅದರಿಂದ ತಿಳಿದುಬರುವುದೇನೆಂದರೆ ಪ್ರವಾದಿ(ಸ) ರವರ ಮೇಲೆ ಅವರಿಗೆ ಎಷ್ಟೊಂದು ಸದ್ಭಾವನೆಯಿತ್ತು. ಪವಾಡದ ಅವಶ್ಯಕತೆಯು ಬರಲಿಲ್ಲ, ನಿಜ ಹೇಳಬೇಕೆಂದರೆ ಯಾರಿಗೆ ಪರಿಸರದ ಅರಿವು ಇರುವುದಿಲ್ಲ. ಅವನೇ ಪವಾಡ ಬಯಸುತ್ತಾನೆ. ಎಲ್ಲಿ ಪರಕೀಯ ಭಾವನೆ ಇರುತ್ತದೆಯೋ ಅಲ್ಲೇ ಭರವಸೆ ಮೂಡುವ ಅವಶ್ಯಕತೆ ಇರುತ್ತದೆ. ಆದರೆ ಯಾರ ಮೇಲೆ ಸಂಪೂರ್ಣ ಭರವಸೆ ಇದೆಯೋ ಅವರಿಗೆ ಪವಾಡದ ಅವಶ್ಯಕತೆಯೇನು? ಒಟ್ಟಾರೆ ಹಝ್‌ರತ್ ಅಬೂಬಕರ್ ಸಿದ್ದೀಖ್(ರ) ದಾರಿಯಲ್ಲಿಯೇ ವಿಷಯ ತಿಳಿದು ವಿಶ್ವಾಸ ತಂದರು. ಮಕ್ಕ ತಲುಪಿದಾಗ ಹಝ್‌ರತ್ ರಸೂಲುಲ್ಲಾಹ್(ಸ) ಅವರ ಸಮ್ಮುಖದಲ್ಲಿ ಹಾಜರಾಗಿ ಕೇಳಿದರು, ನೀವು ಪ್ರವಾದಿಯ ದಾವೆ ಹೂಡಿದ್ದಾರೆಯೇ? ಹಝ್‌ರತ್ ರಸೂಲುಲ್ಲಾಹ್(ಸ) ಹೇಳಿದರು, ಹೌದು ಸರಿಯಾಗಿದೆ. ಆಗ ಹಝ್‌ರತ್ ಅಬೂಬಕರ್ ಹೇಳೀದರು. ನೀವು ಸಾಕ್ಷ್ಯವಾಗಿರಿ ನಾನು ನಿಮ್ಮ ಮೊದಲ ಸಾಕ್ಷಿಯಾಗಿರುತ್ತೇನೆ. ಆದರೆ ಇದು ಕೇವಲ ಮಾತಾಗಿರಲಿಲ್ಲ. ಬದಲು ನುಡಿದಂತೆ ನಡೆದು ತೋರಿಸಿದರು, ಅಂತಿಮ ಸಮಯದವರೆಗೂ ಅದನ್ನು ನಿಭಾಯಿಸಿದರು ಮತ್ತು ಮರಣದ ನಂತರವು ಸಂಗ ಬಿಡಲಿಲ್ಲ. **(ಮಲ್ಫೂಝಾತ್ ಸಂಪುಟ-1, ಪುಟ-337 ಮುದ್ರಣ 2018 ಖಾದಿಯಾನ್)**

**ರಸೂಲುಲ್ಲಾಹ್(ಸ) ರವರು ರೂಪಿಸಿದ ನಿಯಮವೆಂದರೆ ಮುಸಲ್ಮಾನರು ತಮ್ಮ ಎಲ್ಲ ಕಾರ್ಯಗಳನ್ನು "ಬಿಸ್ಮಿಲ್ಲಾಹ್" ಯಿಂದ ಪ್ರಾರಂಭಿಸಬೇಕು.**

ಸಯ್ಯದ್‌ನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) "ಬಿಸ್ಮಿಲ್ಲಾಹ್" ದ ಪ್ರಾಮುಖ್ಯತೆ ಕುರಿತು ನುಡಿಯುತ್ತಾರೆ.

ಬಿಸ್ಮಿಲ್ಲಾಹ್ ಕುರಿತಾದ ಅನುಗ್ರಹಗಳ ಬಗ್ಗೆ ರಸೂಲುಲ್ಲಾಹ್(ಸ) ರವರು ವಿಶೇಷವಾದ ಒತ್ತವನ್ನು ನೀಡಿದ್ದಾರೆ. ಅವರು ನುಡಿದರು. **"ಕುಲ್ಲು ಅಮ್ರಿನ್ ಝೀ ಬಾಲಿನ್ ಲಾ ಯುಬ್‌ದಉ ಫೀಹಿ ಬಿಸ್ಮಿಲ್ಲಾಹಿರ್ರಹ್ಮಾನ್ನಿರ್ರಹೀಮಿ ಅಖ್‌ತಉ"** (ಅರ್‌ಬೀನ್ ಹಾಫಿಝ್ ಅಬ್ದುಲ್ ಖಾದಿರ್ ಅನ್ ಅಬೀ ಹುರೈರಾ, ಉಲ್ಲೇಖ ಅದ್ದಾರುಲ್ ಮನ್ಸೂರ್) ಅಂದರೆ ಯಾವ ಕಾರ್ಯ ಬಿಸ್ಮಿಲ್ಲಾಹ್ ಹೇಳದೆ ಪ್ರಾರಂಭಿಸುವಿರೋ ಆ ಕಾರ್ಯ ಅನುಗ್ರಹ ರಹಿತವಾಗಿರುತ್ತದೆ. ಆದುದರಿಂದ ರಸೂಲುಲ್ಲಾಹ್(ಸ) ಈ ನಿಯಮವನ್ನು ಮಾಡಿದ್ದಾರೆ. ಮುಸಲ್ಮಾನರು ತಮ್ಮ ಎಲ್ಲಾ ಕಾರ್ಯಗಳನ್ನು "ಬಿಸ್ಮಿಲ್ಲಾಹ್" ದಿಂದ ಪ್ರಾರಂಭಿಸಬೇಕು. ಅಂದಹಾಗೆ ಒಂದು ಹದೀಸಿದೆ. **ಉಗ್‌ಲುಖು ಬಾಬಕ ವಝ್‌ಕುರಿಸ್ಮುಲ್ಲಾಹಿ ಅಝ್ಝು ವಜಲ್ಲ ಫಇನ್ನಶ್ಶೈತಾನ ಲಾ ಯಫ್‌ತಹು ಬಾಬ ಮುಗ್‌ಲಖನ್ ವತ್‌ಫಿಊ**

*(ಪುಟ ಸಂಖ್ಯೆ-08 ರಲ್ಲಿ ಮುಂದುವರಿಸಲಾಗಿದೆ)*

لَآ اِلٰہَ اِلَّا اللّٰہُ مُحَمَّدٌ رَّسُوْلُ اللّٰہ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ✿ شَرُّ السُّمُوْمِ عَدَاوَةُ الصُّلَحَاءِ

**ಇಸ್ಲಾಮ್ ಮತ್ತು ಕ್ರೈಸ್ತ ಧರ್ಮದಲ್ಲಿ ಯಾವುದು ಸತ್ಯವಾಗಿದೆ. ಮುಬಾಹಲ ಮೂಲಕ ನಿರ್ಣಯಿಸಿಕೊಳ್ಳಲು ಆಹ್ವಾನ ಒಂದು ವರ್ಷದೊಳಗೆ ಮಸೀಹ್ ಮೌಊದ್(ಅ) ರವರ ಪರವಾಗಿ ಅಲ್ಲಾಹನ ತೀರ್ಪು ಪ್ರಕಟವಾಗದಿದ್ದರೆ ಚರಾ ಸ್ಥಿರ ಆಸ್ತಿ (ಒಟ್ಟು ಹತ್ತು ಸಾವಿರ ರೂಪಾಯಿ) ಯ ಭಾರಿ ಬಹುಮಾನ.**

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥ "ಅಂಜಾಮ್ ಆಥಮ್" ರೂಹಾನಿ ಖಝಾಯಿನ್ ಸಂಪುಟ 11 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಕ್ರೈಸ್ತ ಮತ ಮತ್ತು ಇಸ್ಲಾಮ್ ಮತದಲ್ಲಿ ಯಾವುದು ಸತ್ಯ? ಯಾರ ವಿಶ್ವಾಸಗಳು ಪ್ರಾಕೃತಿಕ ಹಾಗೂ ದೇವನಿಯಮಗಳಿಗೆ ತಕ್ಕುದ್ದಾಗಿವೆ ಎಂಬ ತೀರ್ಪು ಪಡೆಯಲು ಈ ವಿಧಾನ ಪ್ರಸ್ತುತಪಡಿಸಲಾಯಿತು. ಅದು ದುಆ ಮೂಲಕ ಅಲ್ಲಾಹನಿಂದ ತೀರ್ಪು ಬಯಸುವುದಾಗಿದೆ. ಆತನು ಜೀವಂತ ಹಾಗೂ ನೆಲೆನಿಲ್ಲುವ ದೇವನಾಗಿದ್ದಾನೆ ಮತ್ತು ಸದಾ ಕಾಲಕ್ಕೂ ತನ್ನ ನಿಷ್ಠಾವಂತ ದಾಸರಿಗೆ ನೆರವು ನೀಡುವವನಾಗಿದ್ದಾನೆ. ಆದುದರಿಂದ ಅವನಿಂದಲೇ ತೀರ್ಪು ಬಯಸಬೇಕಾಗಿದೆ. ಅವನು ಅವಶ್ಯವಾಗಿ ನೆರವು ನೀಡುವನು. ಕ್ರೈಸ್ತ ಮತದವರು ಮೂವರು ದೇವರೆಂದು ನಂಬುತ್ತಾರೆ. ಅದಾಗ್ಯೂ ಇಸ್ಲಾಮ್ ಏಕ ದೇವನ ಹೊರತು ಯಾರೂ ಆರಾಧ್ಯರಲ್ಲ ಎಂದು ಸಾರುತ್ತದೆ. ತ್ರೀತ್ವ ಮತ್ತು ದೈಹಿಕ ದೇವನ ವಿಶ್ವಾಸವನ್ನು ಅತ್ಯಂತ ಅಪವಿತ್ರ ಮತ್ತು ಅಸಹ್ಯಕರವೆಂದು ಬಾವಿಸುತ್ತದೆ. ಹಾಗೂ ಏಕದೇವನ ಹಾಗೂ ಅಗೋಚರ ದೇವನ ವಿಶ್ವಾಸವನ್ನು ಅತ್ಯಂತ ಪ್ರಿಯಕರ ಮತ್ತು ವಿವೇಕಪೂರ್ಣ, ಪ್ರಾಕೃತಿಕ ಹಾಗೂ ಆತ್ಮಕ್ಕೆ ಶಾಂತಿ ನೆಮ್ಮದಿ ಉಂಟುಮಾಡುವಂತಹದ್ದಾಗಿದೆ ಎಂದು ಸಾರುತ್ತದೆ.

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಈ ವಿಧಾನ ಮುಂದಿಟ್ಟರು. ಆ ಕಾರಣದಿಂದಲೇ ಕ್ರೈಸ್ತ ಪಾದರಿಗಳು ತಮ್ಮ ಅಪವಿತ್ರ ಮತ್ತು ಬಹುದೇವಾರಾಧನೆಯಂತಹ ಅಸಹಜ ವಿಶ್ವಾಸಗಳ ಹೊರತಾಗಿಯೂ ಹಗಲಿರುಳು ನಮ್ಮ ನೇತಾರ ಸಯ್ಯಿದುಲ್ ಮುರ್‌ಸಲೀನ್, ಖೈರುಲ್ ಮುರ್‌ಸಲೀನ್ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ರವರನ್ನು ಬಯ್ಯುವುದು, ಅವರ ಪೈಕಿ ಕಾರ್ಟೂನುಗಳನ್ನು ರಚಿಸುವುದು, (ನೌಝುಬಿಲ್ಲಾಹ್) ಅವರನ್ನು ಒಬ್ಬ ಕೊಲೆಗಡುಕ ಹಾಗೂ ದೌರ್ಜನ್ಯಕರ ರೀತಿಯಲ್ಲಿ ಲೋಕದ ಮುಂದೆ ಪ್ರಸ್ತುತಪಡಿಸುತ್ತಾರೆ. ಇನ್ನೊಂದೆಡೆ ಚರ್ಚಾಕೂಟದಲ್ಲಿ ಸೋಲನನ್ನುಭವಿಸಿಯೂ ತನ್ನ ಸೋಲು ಒಪ್ಪಿಕೊಳ್ಳುವುದಿಲ್ಲ. ಉದಾಹರಣೆಗೆ ಆಥಮನ ವಿಷಯದಲ್ಲಿ ಅವರು ಭವಿಷ್ಯವಾಣಿ ಪೂರ್ಣಗೊಂಡಿಲ್ಲ ಎಂಬ ಎಂಬ ಆರೋಪವನ್ನು ಮಾಡಿದರು. ಚರ್ಚಾಕೂಟದಿಂದ ಸರಿಯಾದ ತೀರ್ಪು ಪಡೆಯುವುದು ಜನಸಾಮಾನ್ಯರಿಗೆ ಸಾಧ್ಯವಾಗುವ ಕೆಲಸವಲ್ಲ. ಆದರೂ ಈ ವಿಧಾನದಿಂದ ಅಜ್ಞಾನಿಗಳೂ ಸಹ ತೀರ್ಪು ಪಡೆಯಬಹುದಾಗಿದೆ. ಯಾರ ಕಡೆ ದೇವನಿದ್ದಾನೆ ಎಂದು. ಉದಾಹರಣೆಗೆ ಹಝ್ರತ್ ಮಸೀಹ್ ಮೌಊದ್(ಅ) ಈ ಘೋಷಣೆ ಮಾಡಿದರೆ ಮುಬಾಹಲ ಫಲವಾಗಿ ವ್ಯಕ್ತಿ ಒಬ್ಬನು ಒಂದು ವರ್ಷದೊಳಗೆ ಮರಣ ಹೊಂದುವನು. ಭವಿಷ್ಯವಾಣಿಯಂತೆಯೇ ಆದರೆ ಈ ಮಾತು ಎಲ್ಲರಿಗೂ ಮನವರಿಕೆಯಾದಂತಾಗುತ್ತದೆ. ಜನಸಾಮಾನ್ಯರಿಗೆ ಆ ಬಗ್ಗೆ ಚಿಂತಿಸುವ ಅಗತ್ಯವಿರುವುದಿಲ್ಲ. ಆದುದರಿಂದ ಹಝ್ರತ್ ಮಸೀಹ್ ಮೌಊದ್(ಅ), ಫಾದರಿಗಳು ದಿನನಿತ್ಯ ಇಸ್ಲಾಮಿನ ಸ್ಥಾಪಕರಿಗೆ ಬಯ್ಯುತ್ತಾರೆ. ಅವರನ್ನು ಸುಳ್ಳುಗಾರ ಎನ್ನುತ್ತಾರೆ, ಅವರು ನಿರ್ಣಯಿಸಬೇಕಾಗುತ್ತದೆ. ಯಾವ ಧರ್ಮ ಮಿಥ್ಯ ಮತ್ತು ಯಾವುದು ಸತ್ಯ ಎಂದು. ಹಝ್ರತ್ ಮಸೀಹ್ ಮೌಊದ್(ಅ) ರವರ ಈ ಬಹುಮಾನದ ಪಂಥ್ವಾನ ನಾವು ಕೆಳಗೆ ಅವರದೇ ಶುಭ ಅಕ್ಷರಗಳಲ್ಲಿ ಪ್ರಸ್ತುತಪಡಿಸುತ್ತೇವೆ. ಅವರು ನುಡಿದರು:

### ಇಸ್ಲಾಮಿನ ಪವಿತ್ರ ವಿಶ್ವಾಸ ಏಕದೇವತ್ವ ಮತ್ತು ಕ್ರೈಸ್ತರ ಅಪವಿತ್ರ ವಿಶ್ವಾಸ ಬಹುದೇವಾರಾಧನೆ ಅಂದರೆ ತ್ರೀತ್ವದ ವಿಶ್ವಾಸವಾಗಿದೆ.

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಕ್ರೈಸ್ತ ಬಾಂಧವರ ವಿಶ್ವಾಸ ಪ್ರಕಾರ ಯಾರು ತ್ರೀತ್ವದ ವಿಶ್ವಾಸ ಹೊಂದುವುದಿಲ್ಲವೋ, ಮತ್ತು ಯೇಸುವಿನ ಪಾಪ ಪರಿಹಾರದ ಮೇಲೆ ವಿಶ್ವಾಸ ಹೊಂದುವುದಿಲ್ಲ ಓ ಅವರನ್ನು ಶಾಶ್ವತ ರೂಪದಲ್ಲಿ ನಗರಕಕ್ಕೆ ಹಾಕಲಾಗುವುದು, ಅಲ್ಲಾಹನು ತನ್ನ ಪವಿತ್ರ ಗ್ರಂಥ ಪವಿತ್ರ ಖುರ್‌ಆನ್‌ನ ಮೂಲಕ ಮುಸಲ್ಮಾನರಿಗೆ ಬೋಧಿಸಿದ್ದೇನೆಂದರೆ ಏಕದೇವತ್ವದ ವಿಶ್ವಾಸದ ಹೊರತು ಮುಕ್ತಿ ಇಲ್ಲ. ಅದೇ ಏಕದೇವತ್ವವಾಗಿದೆ. ಅದರ ಬಗ್ಗೆ ಪರಲೋಕದಲ್ಲಿ ವ್ಯವಹರಿಸಲಾಗುವುದು, ಅವರು ಖುರ್‌ಆನ್‌ನ್ನು ನಂಬಿದ್ದರು ಸರಿ. ಏಕೆಂದರೆ ಅದು ಮಾನವ ಹೃದಯದ ಅಂಕುಶ ಧ್ವನಿಯಾಗಿದೆ. ಅವನ ಸೃಷ್ಟಿಕರ್ತ ಮತ್ತು ಮಾಲೀಕನು ಆ ಏಕದೇವನಾಗಿದ್ದಾನೆ. ಅವನಲ್ಲಿ ಯಾರು ಸಹಭಾಗಿಗಳಲ್ಲ. ಈ ಏಕತ್ವದಲ್ಲಿ ಬಲಾತ್ಕಾರವಾಗಿ ಮನ್ನಿಸುವಂತಹ ಯಾವ ಮಾತೂ ಇಲ್ಲ. ಏಕೆಂದರೆ ಮಾನವ ಹೃದಯದ ಸೃಷ್ಟಿಯ ಜೊತೆಯಲ್ಲಿಯೇ ಅದರ ಅಚ್ಚು ಮಾನವನ ಹೃದಯದಲ್ಲಿ ಹಾಕಲಾಗುತ್ತದೆ.

ಆದರೆ ಕ್ರೈಸ್ತರ ವಿಶ್ವಾಸಗಳಂತೆ ಪರಮ ಸೀಮಾತೀತ ದೇವನನ್ನು ಮೂವರನ್ನು ದೇವರೆಂದು ಅಥವಾ ನಾಲ್ಕು ದೇವರೆಂದು ಪರಿಮಿತಗೊಳಿಸುವುದು ಮತ್ತು ಪ್ರತಿಯೊಂದು ದೇವನನ್ನು ಪರಿಪೂರ್ಣ ಎಂದು ಭಾವಿಸುವುದು ಮತ್ತು ಶ್ರೇಣಿಗಳನ್ನು ನಿರ್ಮಿಸುವುದು, ಆ ದೇವನು ಪ್ರಾಥಮಿಕ ಹಂತದಲ್ಲಿ ಕಲಿಮ ಆಗಿದ್ದನು. ಮತ್ತೆ ಅದೇ ಕಲಿಮ ಮರಿಯಮನ ಉದರದಲ್ಲಿ ಬಿದ್ದನು ಮತ್ತು ಅವಳ ರಕ್ತದಿಂದ ದೇಹ ಪಡೆದನು. ಸಾಮಾನ್ಯ ರೀತಿಯಲ್ಲಿ ಜನಿಸಿದನು ಮತ್ತು ಎಲ್ಲಾ ರೀತಿಯ ದುಃಖಗಳು, ರೋಗ, ಹಲ್ಲಿನ ನೋವು ಮನುಷ್ಯನಿಗೆ ಉಂಟಾಗುವ ಎಲ್ಲಾ ತರಹದ ದುಃಖಗಳು ಸಹಿಸಿಕೊಂಡನು, ಕೊನೆಯಲ್ಲಿ ಮಾನವ ಅವಸ್ಥೆಯಲ್ಲಿ ಹಿಡಿಯಲ್ಪಟ್ಟನು ಮತ್ತು ಶಿಲುಬೆಗೆ ಏರಿಸಲಾಯಿತು. ಇದು ಅತ್ಯಂತ ಅಪವಿತ್ರವಾದ ಬಹುದೇವತ್ವವಾಗಿದೆ, ಅದರಲ್ಲಿ ಮಾನವನನ್ನು ದೇವನನ್ನಾಗಿ ಮಾಡಲಾಗಿದೆ. ದೇವನು ಅದರಿಂದ ಮುಕ್ತನು. ಅವನು ಯಾರ ಉದರದಲ್ಲಿ ಬೀಳಲಿಲ್ಲ, ದೇಹ ಪಡೆಯಲಿಲ್ಲ. ಶತ್ರುಗಳ ಕೈಯಲ್ಲಿ ಸೆರೆಯಾಗಲಿಲ್ಲ, ಮಾನವ ಪ್ರಕೃತಿ ಅದನ್ನು ಒಪ್ಪುವುದಿಲ್ಲ, ದೇವನ ಮೇಲೆ ಇಂತಹ ದುಃಖಗಳು ಬರುವುದು ಎಂದು, ಅವನು ಎಲ್ಲಾ ಗೌರವಗಳು ಒಳಗೊಂಡಿದ್ದಾನೆ. ಅವನು ಎಲ್ಲಾ ಗೌರವಗಳಿಗೆ ಮೂಲವಾಗಿದ್ದಾನೆ, ಅವನು ಹೇಗೆ ತಾನೇ ಇಂತಹ ಅಪಮಾನಗಳಿಗೆ ಗುರಿಯಾಗುವನು. ಕ್ರೈಸ್ತರು ಈ ಮಾತನ್ನು ಒಪ್ಪುತ್ತಾರೆ. ಅಲ್ಲಾಹನ (ದೇವನ) ಅಪಮಾನಕ್ಕೆ ಅದು ಏಕಮಾತ್ರ ಸಂದರ್ಭವಾಗಿತ್ತು. ಅದಕ್ಕಿಂತ ಮುಂಚೆ ಅಂತಹ ಅಪಮಾನ ಅಲ್ಲಾಹನು (ದೇವನು) ಎಂದೂ ಪಡೆದಿಲ್ಲ. ಎಂದೂ ಅಂತಹ ಸಂದರ್ಭ ಉಂಟಾಗಲಿಲ್ಲ. ದೇವನು ಸಹ ಮನುಷ್ಯನ ರೀತಿಯಲ್ಲಿ ಒಬ್ಬ ಸ್ತ್ರೀಯ ಉದರದಲ್ಲಿ ವೀರ್ಯ ರೂಪದಲ್ಲಿ ಸೇರಿ ರೂಪ ಪಡೆದನು. ಈ ರೀತಿ ಮನುಷ್ಯನ ರೀತಿಯಲ್ಲಿ ದೇವನು ಒಬ್ಬ ಸ್ತ್ರೀಯ ಉದರದಿಂದ ಜನಿಸಿದ್ದು ಯಾರು ಎಂದೂ ಆಲಿಸಲಿಲ್ಲ. ಈ ಎಲ್ಲಾ ಮಾತುಗಳನ್ನು ಕ್ರೈಸ್ತರು ಸ್ವಯಂ ಒಪ್ಪಿಕೊಳ್ಳುತ್ತಾರೆ. ಮುಂಚೆ ಈ ಮೂರು ದೇವರುಗಳು ಮೂರು ಪ್ರತ್ಯೇಕ ದೇಹಗಳು ಹೊಂದಿರಲಿಲ್ಲ ಎಂದು ಸಹ ಒಪ್ಪಿಕೊಳ್ಳುತ್ತಾರೆ. ಆದರೆ ಈ ವಿಶಿಷ್ಠ ಕಾಲಘಟ್ಟದಿಂದ ಅದನ್ನು ಇಲ್ಲಿಯವರೆಗೆ 1896 ವರ್ಷಗಳು ಆಗಿವೆ, ಮೂರು ದೇವರುಗಳಿಗೆ ಪ್ರತ್ಯೇಕ ದೇಹಗಳು ಲಭಿಸಿವೆ. ತಂದೆಯ ರೂಪವು ಆಥಮನಂತಿದೆ. ಏಕೆಂದರೆ ಅವನು ಆಥಮನನ್ನು ತನ್ನ ರೂಪದಲ್ಲಿ ಸೃಷ್ಟಿಸಿದ್ದಾನೆ. ನೋಡಿರಿ. ತಾರಾತು ಪೈಥಾಯಿಷ್ ಬಾಬ್ 1, ವಚನ 27, ಹಾಗೂ ಪುತ್ರ ಯೇಸುವಿನ ರೂಪ ಪಡೆದನು. ನೋಡಿರಿ ಯುಹನ್ನ ಬಾಬ್ ವಚನ 1, ರೂಹುಲ್ ಖುದುಸ್ ಪಾರಿವಾಳ ರೂಪದಲ್ಲಿ ಪರಿವರ್ತಿತನಾದನು. ನೋಡಿರಿ ಮತ್ತಾಯ ಬಾಬ್ 3, ವಚನ 16, ಈ ದೇಹಧಾರಿತ ದೇವರುಗಳು ಕ್ರೈಸ್ತರ ಕಲ್ಪನೆಯಲ್ಲಿ ಶಾಶ್ವತವಾಗಿ ಪ್ರತ್ಯೇಕ ಅಸ್ತಿತ್ವ ಹೊಂದುವುದಾಗಿವೆ. ಅದಾಗ್ಯೂ ಮೂವರು ಸೇರಿ ಒಂದೇ ದೇವರಾಗಿದೆ. ಆದರೆ ಯಾರಾದರೂ ಹೇಳಬಲ್ಲರೇ, ಹೇಳಬಹುದಾದರೆ ನಮಗೆ ಹೇಳಲಿ, ಶಾಶ್ವತವಾಗಿ ದೇಹಾಧಾರಿತವಾಗಿಯೂ ಬದಲಾವಣೆ ಹೊಂದಿದರೂ ಈ ಮೂವರು "ಏಕ' ಹೇಗೆ ಆದರು. **ನಮಗೆ ಯಾರೇ ಆಗಲಿ, ಡಾ॥ ಮಾರ್ಟಿನ್ ಕ್ಲಾರ್ಕ್ ಮತ್ತು ಪಾದರಿ ಇಮಾಮುದ್ದೀನ್ ಮತ್ತು ಪಾದರಿ ಠಾಕೂರ್ ದಾಸ್‌ರವರ ಪ್ರತ್ಯೇಕ ಪ್ರತ್ಯೇಕ ಅಸ್ತಿತ್ವ ಇದ್ದರೂ ಸಹ ಒಂದು ದೇಹ ಮಾಡಿ ತೋರಿಸಲಿ. ನಾವು ಪಂಥಾಹ್ವಾನ ನೀಡುತ್ತೇವೆ. ಮೂವರನ್ನು ಜಜ್ಜಿಯೂ ಒಬ್ಬನ ಮಾಂಸ ಒಬ್ಬನಿಗೆ ಸೇರಿಸಿದರೂ ಮೂವರನ್ನು ಏಕನಾಗಿ ಮಾಡುವುದು ಸಾಧ್ಯವಿಲ್ಲ. ಈ ತಾತ್ಕಾಲಿಕ ನಶ್ವರ ದೇಹವುಳ್ಳ ಪ್ರಾಣಿಗಳು ಒಂದು ದೇಹವಾಗಲು ಸಾಧ್ಯವಿಲ್ಲದಿರುವಾಗ ಇಂತಹ ಮೂರು ದೇಹಗಳು ಕ್ರೈಸ್ತರ ವಿಶ್ವಾಸಗಳನ್ವಯ ಬದಲಾವಣೆ ಮತ್ತು ತಾರತಮ್ಯತೆ ಸಿಂಧುವಲ್ಲ, ಅವು ಹೇಗೆ ತಾನೆ ಒಂದಾಗುವುದು?**

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಅಲ್ಲಾಹನಾಣೆ, ನನಗೆ ಶಿಕ್ಷೆಯೂ ಸಿಗದಿರಲಿ, ನನಗೆ ಯಾವುದೇ ಪ್ರತಿಫಲವೂ ಬೇಡ ಎಂಬ ರೀತಿಯಲ್ಲಿ ನನಗೆ ಮುಕ್ತಿ ಸಿಗಲಿ ಎಂದಾಗಿದೆ ನನ್ನ ಇಚ್ಛೆ.**

**ರಸೂಲುಲ್ಲಾಹ್[ಸ] ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝಮ್ ಹಝ್ರ‌ತ್ ಉಮರ್ ಬಿನ್ ಖತ್ತಾಬ್[ರ]ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಹಝ್ರತ್ ಉಮರ್[ರ]ರವರ ಜೀವನದ ಕೆಲವು ಘಟನೆಗಳು ಮತ್ತು ಹಝ್ರತ್ ಉಮರ್(ರ)ರವರ ಬಗ್ಗೆ ಸಹಾಬರವರ ಮತ್ತು ಪೌರಸ್ತ್ಯ ಲೇಖಕರ ಅಭಿಪ್ರಾಯಗಳ ಪ್ರಸ್ತಾವನೆ**

**ಐದು ದಿವಂಗತರಾದ ಸನ್ಮಾನ್ಯ ಸಾಹಿಬ್‌ಝಾದಿ ಆಸಿಫ ಮಸ್‌ಊದ ಬೇಗಂ ಸಾಹಿಬ, ಸನ್ಮಾನ್ಯ ಕ್ಲಾರ್ ಆಪಾ ಸಾಹಿಬ, ವಿಂಗ್ ಕಮಾಂಡರ್ ಅಬ್ದುರ್ರಶೀದ್ ಸಾಹಿಬ್, ಅಮೇರಿಕದ ಕರೀಂ ಅಹ್ಮದ್ ಸಾಹಿಬ್ ಮತ್ತು ಹಫೀಝ್. ಅಹ್ಮದ್ ಘುಮನ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಸಬೀಹ ಹಾರೂನ್ ಸಾಹಿಬರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **22–10–2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಕಳೆದ ಖುತ್‌ಬದಲ್ಲಿ ಹಝ್ರತ್ ಉಮರರ(ರ) ಶಹಾದತಿಗೆ ಸಂಬಂಧಿಸಿ ಹಝ್ರತ್ ಉಬೈದುಲ್ಲಾಹ್ ಬಿನ್ ಉಮರ್ ಮತ್ತು ಹಝ್ರತ್ ಉಸ್ಮಾನ್‌ರ(ರ) ಪರಸ್ಪರ ಜಗಳದ ಬಗ್ಗೆ ಪ್ರಸ್ತಾಪಿಸಿದ್ದೆ. ಅವರ ಮಧ್ಯೆ ನಡೆದ ಜಗಳದ ಬಗ್ಗೆ ಒಂದು ವರದಿಯನ್ನು ಹೇಳಿದ್ದೆ. ಅವರ ಮಧ್ಯೆ ಜಗಳ ನಡೆಯಿತು ಎಂಬುದು ಎಷ್ಟರ ಮಟ್ಟಿಗೆ ಸರಿಯೆಂದು ಅಲ್ಲಾಹನೇ ಬಲ್ಲನು ಎಂದೂ ಹೇಳಿದ್ದೆ. ಈ ಕುರಿತು ಹೆಚ್ಚಿನ ಶೋಧನೆ ನಡೆಸಿದ ನಂತರ ಲಭಿಸಿದ ಸಂಗತಿಗಳ ಬಗ್ಗೆಯೂ ನಾನು ಹೇಳುತ್ತೇನೆ. ಹಝ್ರತ್ ಉಬೈದುಲ್ಲಾಹ್ ಬಿನ್ ಉಮರ್(ರ) ಮತ್ತು ಹಝ್ರತ್ ಉಸ್ಮಾನ್‌ರ ನಡುವೆ ಜಗಳ ನಡೆದ ಸಮಯದಲ್ಲಿ ಹಝ್ರತ್ ಉಸ್ಮಾನ್(ರ) ಖಲೀಫ ಆಗಿರಲಿಲ್ಲವೆಂದೂ ಒಂದೆಡೆ ಪ್ರಸ್ತಾಪಿಸಲಾಗಿದೆ. "ಇಂದು ನಾನು ಮದೀನದ ಯಾವನೇ ಕೈದಿಯನ್ನು ಜೀವಂತವಾಗಿ ಬಿಡಲಿಕ್ಕಿಲ್ಲ" ಎಂದು ಹಝ್ರತ್ ಉಬೈದುಲ್ಲಾಹ್ ನಿರ್ಧರಿಸಿದ್ದರು. ಮೊತ್ತಮೊದಲು ಮುಹಾಜಿರರು ಅವರ ವಿರುದ್ಧ ಒಟ್ಟುಗೂಡಿದ್ದರು. ಮುಹಾಜಿರರು ಅವರನ್ನು ತಡೆದರು ಮತ್ತು ಅವರಿಗೆ ಬೆದರಿಕೆ ಹಾಕಿದರು. ಆದರೆ "ಅಲ್ಲಾಹನಾಣೆ, ನಾನು ಅವರನ್ನು ಖಂಡಿತ ಕೊಲ್ಲುವೆನು" ಎಂದು ಉಬೈದುಲ್ಲಾಹ್ ಹೇಳಿದರು. ಎಂದರೆ ಎಲ್ಲ ಗುಲಾಮರನ್ನು ಮತ್ತು ಕೈದಿಗಳನ್ನು ಕೊಲ್ಲುವೆನೆಂದು ಉಬೈದುಲ್ಲಾಹ್ ಹೇಳಿದರು. ಮುಹಾಜಿರರ ಮಾತಿಗೂ ಅವರು ಬೆಲೆ ಕೊಡಲಿಲ್ಲ. ಕೊನೆಗೆ ಅಮ್ರ್ ಬಿನ್ ಆಸ್(ರ) ಅವರೊಂದಿಗೆ ನಿರಂತರ ಚರ್ಚೆ ನಡೆಸಿದರು. ನಂತರ ಅವರು ತನ್ನ ಖಡ್ಗವನ್ನು ಅಮ್ರ್ ಬಿನ್ ಆಸ್‌ರಿಗೆ ಒಪ್ಪಿಸಿದರು. ಅನಂತರ ಅವರಿಗೆ ತಿಳಿಹೇಳಲು ಸಅದ್ ಬಿನ್ ಅಬೀ ವಖಾಸ್(ರ) ಅವರ ಬಳಿಗೆ ಬಂದರು. ಅವರು ಸಅದ್‌ರೊಂದಿಗೂ ಜಗಳವಾಡಿದರು. ಹಝ್ರತ್ ಉಸ್ಮಾನ್‌ರೊಂದಿಗೂ ಜಗಳವಾಗಿತ್ತು ಮತ್ತು ಜನರು ಅವರನ್ನು ರಕ್ಷಿಸಿದರು ಎಂದು ಪ್ರಸ್ತಾಪಿಸಲಾಗಿತ್ತು. ಈ ಘಟನೆ ನಡೆದಾಗ ಹಝ್ರತ್ ಉಸ್ಮಾನ್(ರ) ಯಾರ ಬೈಅತನ್ನು ಸ್ವೀಕರಿಸಿರಲಿಲ್ಲ. ಎಂದರೆ, ಅದುವರೆಗೂ ಅವರು ಖಲೀಫರಾಗಿರಲಿಲ್ಲ. (ಸೀರತ್ ಉಮರ್ ಫಾರೂಖ್(ರ), ಮುಹಮ್ಮದ್ ರಿಝಾ(ಅನುವಾದಕರು) ಪುಟ–342–343, ಪ್ರಕಟಣೆ ಮಕ್ತಬ ಇಸ್ಲಾಮಿಯ ಲಾಹೋರ್ 2010)

ಹಝ್ರತ್ ಉಬೈದುಲ್ಲಾಹ್‌ರನ್ನು ಈ ಘಟನೆಯ ನಂತರ ಬಂಧಿಸಲಾಗಿತ್ತು ಎಂಬುದಾಗಿಯೂ ಸೂಚನೆ ಸಿಗುತ್ತದೆ. ಹಝ್ರತ್ ಉಸ್ಮಾನ್(ರ) ಖಲೀಫರಾಗಿ ಎಲ್ಲರ ಬೈಅತ್ ಸ್ವೀಕರಿಸಿದ ನಂತರ ಹಝ್ರತ್ ಉಬೈದುಲ್ಲಾಹ್‌ರನ್ನು ಹಝ್ರತ್ ಉಸ್ಮಾನ್‌ರ ಸನ್ನಿಧಿಗೆ ತರಲಾಯಿತು. ಅಮೀರುಲ್ ಮೂಮಿನೀನ್ ಆದ ಹಝ್ರತ್ ಉಸ್ಮಾನ್(ರ) ಮುಹಾಜಿರ್ ಮತ್ತು ಅನ್ಸಾರರನ್ನು ಸಂಬೋಧಿಸಿ ಕೇಳಿದರು: ಇಸ್ಲಾಮಿನಲ್ಲಿ ಬಿರುಕು ಉಂಟುಮಾಡಿರುವ ಈ ವ್ಯಕ್ತಿಯ ಬಗ್ಗೆ ನನಗೆ ಸಲಹೆ ನೀಡಿರಿ. ಹಝ್ರತ್ ಅಲಿ ಬಿನ್ ಅಬೂ ತಾಲಿಬ್ ಹೇಳಿದರು: ಇವರನ್ನು ಬಿಟ್ಟುಬಿಡುವುದು ಅನ್ಯಾಯವಾಗಿದೆ. ನನ್ನ ಅಭಿಪ್ರಾಯದಲ್ಲಿ ಉಬೈದುಲ್ಲಾಹ್ ಬಿನ್ ಉಮರ್‌ರನ್ನು ಕೊಲ್ಲಬೇಕು. ಆದರೆ ಕೆಲವು ಮುಹಾಜಿರರು ಈ ಅಭಿಪ್ರಾಯವನ್ನು ಬಹಳ ಕಠಿಣ ನಿರ್ಧಾರವೆಂದು ಹೇಳಿದರು. "ನಿನ್ನೆ ಉಮರ್(ರ) ವಧಿಸಲ್ಪಟ್ಟರು, ಇಂದು ಅವರ ಮಗನು ಕೊಲ್ಲಲ್ಪಡಬೇಕೇ" ಎಂದು ಅವರು ಕೇಳಿದರು. ಈ ಮಾತಿನಿಂದ ಅಲ್ಲಿದ್ದವರು ದುಃಖಿತರಾದರು. ಆಗ ಹಝ್ರತ್ ಅಲಿ(ರ) ಸಹ ಸುಮ್ಮನಾದರು. ಆದರೆ ಯಾರಾದರೂ ಈ ತುರ್ತು ಪರಿಸ್ಥಿತಿಯಿಂದ ರಕ್ಷಣೆ ಪಡೆಯಲು ಏನಾದರೂ ಸಲಹೆ ನೀಡಲಿ ಎಂದು ಬಯಸಿದ್ದರು. ಹಝ್ರತ್ ಅಮ್ರ್ ಬಿನ್ ಆಸ್(ರ) ಈ ಸಭೆಯಲ್ಲಿ ಉಪಸ್ಥಿತರಿದ್ದರು. ಅವರು ಹೇಳಿದರು: ಈ ಘಟನೆ ನೀವು ಖಲೀಫರಾಗುವುದಕ್ಕೆ ಮುಂಚಿನದ್ದಾಗಿದೆ. ಆದ್ದರಿಂದ ಅಲ್ಲಾಹನು ನಿಮ್ಮನ್ನು ಕ್ಷಮಿಸುವನು. ನೀವು ಈ ವಿಷಯದ ಜವಾಬ್ದಾರರಲ್ಲ. ಆದರೆ ಹಝ್ರತ್ ಉಸ್ಮಾನ್‌ರಿಗೆ ಈ ಅಭಿಪ್ರಾಯದಿಂದ ಸಮಾಧಾನವಾಗಲಿಲ್ಲ. ಪರಿಹಾರ ಧನವನ್ನು ಕೊಡುವುದು ಉತ್ತಮವೆಂದು ಅವರು ಭಾವಿಸಿದರು. ಹೀಗೆ ಅವರು ಹೇಳಿದರು: ನಾನು ಕೊಲ್ಲಲ್ಪಟ್ಟವರ ಮೇಲ್ನೋಟಗಾರನಾಗಿದ್ದೇನೆ. ಆದ್ದರಿಂದ ಪರಿಹಾರ ಧನವನ್ನು ನಿಶ್ಚಯಿಸಿ ನನ್ನ ಸಂಪತ್ತಿನಿಂದ ಅದನ್ನು ಅವರಿಗೆ ಪಾವತಿಸುವೆನು. ಈ ಕುರಿತು ಇದೊಂದು ಅಭಿಪ್ರಾಯವಾಗಿದೆ. (ಸಯ್ಯದುನಾ ಉಮರ್ ಫಾರೂಖ್ ಆಝಮ್(ರ), ಮುಹಮ್ಮದ್ ಹುಸೈನ್ ಹೈಕಲ್ ಅನುವಾದಕರು, ಪುಟ–881–882, ಇಸ್ಲಾಮಿ ಕುತುಬ್ ಖಾನ ಲಾಹೋರ್)

ತಾರೀಕ್ ತಬರಿಯ ಪ್ರಕಾರ ಹಝ್ರತ್ ಉಬೈದುಲ್ಲಾಹ್‌ರನ್ನು ಹಝ್ರತ್ ಉಸ್ಮಾನ್(ರ) ಹುರ್ಮುಝಾನಿನ ಮಗನಿಗೆ ಒಪ್ಪಿಸಿದ್ದರು. ತಂದೆಯ ಕೊಲೆಯ ಬದಲಿಯಾಗಿ ಅವರನ್ನು ಕೊಲ್ಲಲು ಅನುಮತಿ ಕೊಟ್ಟರು. ಆದರೆ ಹುರ್ಮುಝಾನಿನ ಮಗನು ಉಬೈದುಲ್ಲಾಹ್‌ರನ್ನು ಕ್ಷಮಿಸಿದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಬಗ್ಗೆ ಹೀಗೆ ವಿವರಿಸಿರುವರು:

ತಬರಿಯಲ್ಲಿ ಖುಮಾಧ್‌ಬಾನ್ ಬಿನ್ ಹುರ್ಮುಝಾನ್ ತನ್ನ ತಂದೆಯ ಕೊಲೆಯ ಘಟನೆಯನ್ನು ವಿವರಿಸಿದ್ದಾರೆ. ಹುರ್ಮುಝಾನ್ ಒಬ್ಬ ಇರಾನಿ ಸರದಾರನಾಗಿದ್ದರು ಮತ್ತು ಅಗ್ನಿಪೂಜಕನಾಗಿದ್ದನು. ಹಝ್ರತ್ ಉಮರ್‌ರನ್ನು ಕೊಂದ ಸಂಚಿನಲ್ಲಿ ಅವರು ಭಾಗಿಯಾಗಿದ್ದರು ಎಂದು ಸಂಶಯಿಸಲಾಗುತ್ತಿತ್ತು. ಆಗ ಯಾವುದೇ ತನಿಖೆ ನಡೆಸದೇ ಆವೇಶದಿಂದ ಉಬೈದುಲ್ಲಾಹ್ ಬಿನ್ ಉಮರ್(ರ) ಹುರ್ಮುಝಾನನ್ನು ಕೊಂದರು. ಹುರ್ಮುಝಾನಿನ ಮಗನು ಹೇಳುತ್ತಾರೆ: ಇರಾನಿ ಜನರು ಮದೀನದಲ್ಲೂ ಪರಸ್ಪರ ಭೇಟಿಯಾಗುತ್ತಿದ್ದರು. ಒಂದು ದಿನ ಹಝ್ರತ್ ಉಮರರ ಹಂತಕನಾದ ಫಿರೋಝ್ ನನ್ನ ತಂದೆಯನ್ನು ಭೇಟಿಯಾದರು. ಅವನ ಬಳಿ ಒಂದು ಕಠಾರಿಯಿತ್ತು. ಅದರ ಇಮ್ಮುಖಗಳು ಹರಿತವಾಗಿತ್ತು. ನನ್ನ ತಂದೆ ಆ ಕತ್ತಿಯನ್ನು ಹಿಡಿದರು. ಈ ದೇಶದಲ್ಲಿ ಈ ಚೂರಿಯಿಂದ ಏನು ಪ್ರಯೋಜನವೆಂದು ಅವರು ಅವನೊಡನೆ ಕೇಳಿದರು. ಎಂದರೆ, ಇದು ಸಮಾಧಾನದ ದೇಶವಾಗಿದೆ. ಇಲ್ಲಿ ಆಯುಧಗಳ ಆವಶ್ಯಕತೆಯೇನೆಂದು ಅವರು ಕೇಳಿದರು. ಅವನು ಹೇಳಿದನು: ನಾನು ಇದರಿಂದ ಒಂಟೆಯನ್ನು

ಅಟ್ಟಿಸಿಕೊಂಡು ಹೋಗುತ್ತೇನೆ. ಅವರಿಬ್ಬರೂ ಮಾತುಕತೆ ನಡೆಸುತ್ತಿರುವಾಗ ಅವರನ್ನು ಯಾರೋ ನೋಡಿದರು. ಹಝ್ರತ್ ಉಮರ್(ರ) ಕೊಲ್ಲಲ್ಪಟ್ಟಾಗ, ಹುರ್ಮುಝಾನ್ ಸ್ವತಃ ಈ ಕತ್ತಿಯನ್ನು ಫಿರೋಝಿಗೆ ಕೊಡುವುದಾಗಿ ನಾನು ನೋಡಿದ್ದೇನೆ ಎಂದು ಅವರಿಬ್ಬರನ್ನು ಕಂಡ ಆ ವ್ಯಕ್ತಿ ಹೇಳಿದರು. ಇದನ್ನು ಕೇಳಿದಾಗ ಹಝ್ರತ್ ಉಮರ್‌ರ ಕಿರಿಯ ಮಗನು ಹೋಗಿ ನನ್ನ ತಂದೆಯನ್ನು ಕೊಂದರು. ಹಝ್ರತ್ ಉಸ್ಮಾನ್(ರ) ಖಲೀಫರಾದಾಗ, ಅವರು ನನ್ನನ್ನು ಕರೆದರು. ಉಬೈದುಲ್ಲಾಹ್‌ರನ್ನು ಹಿಡಿದು ನನಗೆ ಒಪ್ಪಿಸಿದರು. ಅವರು ಹೇಳಿದರು: ಹೇ ನನ್ನ ಪುತ್ರ, ಇವನು ನಿನ್ನ ತಂದೆಯ ಹಂತಕನಾಗಿದ್ದಾನೆ. ನಿನಗೆ ನಮಗಿಂತ ಹೆಚ್ಚು ಇವನ ಮೇಲೆ ಅಧಿಕಾರವಿದೆ. ಹೋಗು ಮತ್ತು ಇವನನ್ನು ಕೊಲ್ಲು. ನಾನು ಅವರನ್ನು ಹಿಡಿದು ಪಟ್ಟಣದಿಂದ ಹೊರಗೆ ನಡೆದೆನು. ಮಾರ್ಗದಲ್ಲಿ ನನ್ನನ್ನು ಭೇಟಿಯಾಗುವವರೆಲ್ಲ ನನ್ನ ಜೊತೆಗೆ ಸೇರುತ್ತಿದ್ದರು. ಆದರೆ ಯಾರೂ ನನ್ನನ್ನು ವಿರೋಧಿಸಲಿಲ್ಲ. ಅವರನ್ನು ಬಿಟ್ಟುಬಿಡಲು ಮಾತ್ರ ಅವರು ವಿನಂತಿಸುತ್ತಿದ್ದರು. ನಾನು ಎಲ್ಲ ಮುಸ್ಲಿಮರನ್ನು ಸಂಬೋಧಿಸಿ ಹೇಳಿದೆ: ನನಗೆ ಇವರನ್ನು ಕೊಲ್ಲಲು ಅಧಿಕಾರವಿದೆಯೇ? ಹೌದು ನಿನಗೆ ಅವರನ್ನು ಕೊಲ್ಲುವ ಹಕ್ಕಿದೆ ಎಂದು ಎಲ್ಲರೂ ಹೇಳಿದರು. ಅವರು ಯಾವುದೇ ಪುರಾವೆಗಳಿಲ್ಲದೇ ನಿನ್ನ ತಂದೆಯನ್ನು ಕೊಂದಿರುವರು ಎಂದು ಹೇಳಿ ಎಲ್ಲರೂ ಉಬೈದುಲ್ಲಾಹ್‌ರನ್ನು ಟೀಕಿಸಿದರು. ಆಗ ನಾನು ಅಲ್ಲಾಹ್ ಮತ್ತು ಜನರ ಪರವಾಗಿ ಉಬೈದುಲ್ಲಾಹ್‌ರನ್ನು ಬಿಟ್ಟುಬಿಟ್ಟೆ. ಮುಸ್ಲಿಮರು ಸಂತೋಷದಿಂದ ನನ್ನನ್ನು ಅವರ ಹೆಗಲಲ್ಲಿ ಎತ್ತಿಕೊಂಡರು. ಅಲ್ಲಾಹನಾಣೆ ನಾನು ನನ್ನ ಮನೆಯ ತನಕ ಜನರ ಹೆಗಲುಗಳ ಮತ್ತು ತಲೆಗಳ ಮೇಲಿಂದ ತಲುಪಿದೆ. ಅವರು ನನ್ನ ಕಾಲುಗಳು ನೆಲಕ್ಕೆ ಹಾಕಲು ಕೂಡ ಬಿಡಲಿಲ್ಲ. ಮುಸ್ಲಿಮೇತರನ್ನು ಕೊಂದ ಮುಸ್ಲಿಮ್ ಹಂತಕನಿಗೂ ಮರಣದಂಡನೆ ನೀಡುವುದು ಸಹಾಬರ ರೀತಿಯಾಗಿತ್ತು ಎಂದು ಈ ವರದಿಯಿಂದ ಸಾಬೀತಾಗುತ್ತದೆ. ಯಾವುದೇ ಆಯುಧದಿಂದ ಯಾವನೇ ಕೊಲ್ಲಲ್ಪಟ್ಟರೂ ಹಂತಕನನ್ನು ಕೊಲ್ಲಲಾಗುವುದು ಎಂದು ಇದರಿಂದ ಸಾಬೀತಾಗುತ್ತದೆ. ಅದೇ ರೀತಿಯಲ್ಲಿ ಹಂತಕನನ್ನು ಬಂಧಿಸುವುದು ಮತ್ತು ಶಿಕ್ಷೆ ನೀಡುವುದು ಸರ್ಕಾರದ ಕೆಲಸವಾಗಿದೆ ಎಂದೂ ಸಾಬೀತಾಗುತ್ತದೆ. ಏಕೆಂದರೆ, ಉಬೈದುಲ್ಲಾಹ್ ಬಿನ್ ಉಮರ್‌ರನ್ನು ಬಂಧಿಸಿದ್ದು ಮತ್ತು ಅವರನ್ನು ಕೊಲ್ಲಲು ಹುರ್ಮುಝಾನಿನ ಮಗನಿಗೆ ಒಪ್ಪಿಸಿದ್ದು ಹಝ್ರತ್ ಉಸ್ಮಾನ್(ರ) ಆಗಿದ್ದರು ಎಂದು ಈ ವರದಿಯಿಂದ ಸಾಬೀತಾಗುತ್ತದೆ. ಹುರ್ಮುಜ಼ಾನಿನ ಯಾವನೇ ವಾರಸುದಾರನು ಉಬೈದುಲ್ಲಾಹ್‌ರ ವಿರುದ್ಧ ಮೊಕದ್ದಮೆ ಹೂಡಿರಲಿಲ್ಲ. ಬಂಧಿಸಿಯೂ ಇರಲಿಲ್ಲ.

ಇಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಂತಕನಿಗೆ ಶಿಕ್ಷೆ ನೀಡಲು ಕೊಲ್ಲಲ್ಪಟ್ಟ ವ್ಯಕ್ತಿಯ ವಾರಸುದಾರನಿಗೆ ಹಂತಕನನ್ನು ಒಪ್ಪಿಸಬೇಕೇ? ಅಥವಾ ಸರ್ಕಾರವೇ ಶಿಕ್ಷೆ ನೀಡಬೇಕೆ ಎಂಬ ಸಂಶಯದ ನಿವಾರಣೆ ಮಾಡುವುದು ಇಲ್ಲಿ ಆವಶ್ಯಕ. ನೆನಪಿಡಬೇಕಾದ ಸಂಗತಿಯೇನೆಂದರೆ ಇದೊಂದು ಉಪವಿಷಯವಾಗಿದೆ. ಆದ್ದರಿಂದ ಪ್ರತಿಯೊಂದು ಕಾಲಘಟ್ಟಕ್ಕೆ ಅನುಸಾರ ತೀರ್ಮಾನ ಮಾಡಲು ಇಸ್ಲಾಂ ಅನುಮತಿ ನೀಡುತ್ತದೆ. ಸಮುದಾಯವು ತನ್ನ ಸಂಸ್ಕೃತಿ ಮತ್ತು ಸ್ಥಿತಿಗತಿಗಳ ಪ್ರಕಾರ ಯಾವುದು ಹೆಚ್ಚು ಸರಿಯೆಂದು ಭಾವಿಸುತ್ತದೋ ಅದರಂತೆ ಮಾಡಬಹುದಾಗಿದೆ. ಎರಡೂ ವಿಧಾನಗಳೂ ತಮ್ಮ ತಮ್ಮ ವಿಶೇಷ ಸ್ಥಿತಿಗಳಿಗೆ ಅನುಗುಣವಾಗಿ ಪ್ರಯೋಜನಕರವಾಗಿರುವುವು. (ತಫ್ಸೀರೆ ಕಬೀರ್, ಸಂಪುಟ-2, ಪುಟ-359-361)

ಈ ವಿವರಣೆಯ ನಂತರ ನಾನೀಗ ಹಝ್ರತ್ ಉಮರರ ಬೇರೆ ಕೆಲವು ಘಟನೆಗಳನ್ನು ಪ್ರಸ್ತಾಪಿಸುವೆನು. ನಿಧನದ ಸಮಯದಲ್ಲಿ ಹಝ್ರತ್ ಉಮರರ ವಿನಯವಂತಿಕೆಯ ಸ್ಥಿತಿ ಏನಾಗಿತ್ತು ಎಂಬುದರ ಬಗ್ಗೆ ಅವರ ಪುತ್ರ ವರದಿ ಮಾಡುತ್ತಾರೆ. ಅವರು ತನ್ನ ಮಗನೊಡನೆ ಹೀಗೆ ಹೇಳಿದ್ದರು: ನನಗೆ ಕಫನ್ ಮಾಡುವಾಗ ಮಧ್ಯೆ ಮಾರ್ಗದಿಂದ ವರ್ತಿಸಬೇಕು. ಅಲ್ಲಾಹನು ಬಯಸುವುದಾದರೆ, ಆ ಬಟ್ಟೆಗಿಂತ ಉತ್ತಮವಾದುದನ್ನು ಅವನು ನನಗೆ ನೀಡುವನು. ಅದಕ್ಕೂ ಅರ್ಹನಾಗಿರದಿದ್ದರೆ, ಅದನ್ನೂ ಕಿತ್ತೆಗೆಯುವನು. ಅದೇ ರೀತಿಯಲ್ಲಿ ನನ್ನ ಖಬರಿನ ಬಗ್ಗೆಯೂ ಮಧ್ಯೆಮಾರ್ಗವನ್ನು ಸ್ವೀಕರಿಸಬೇಕು. ಸರಳತೆಯನ್ನು ಕೈಗೊಳ್ಳಬೇಕು. ಅಲ್ಲಾಹನು ಬಯಸುವುದಾದರೆ ಅದನ್ನು ಅವನು ವಿಶಾಲಗೊಳಿಸುವನು. ಇಲ್ಲದಿದ್ದರೆ ನನ್ನ ಎಲುಬುಗಳು ಮುರಿಯುವ ರೀತಿಯಲ್ಲಿ ಅದನ್ನು ಸಂಕುಚಿತಗೊಳಿಸುವನು. ಏಕೆಂದರೆ, ನನ್ನನ್ನು ಅತಿ ಹೆಚ್ಚು ತಿಳಿದಿರುವವನು ಅಲ್ಲಾಹನು ಮಾತ್ರ. ನನ್ನ ಜನಾಝದೊಂದಿಗೆ ಸ್ತ್ರೀಯರನ್ನು ಕೊಂಡು ಹೋಗದಿರಿ. ನನ್ನಲ್ಲಿ ಇಲ್ಲದ ಸಂಗತಿಯನ್ನು ಹೊಗಳಿ ಹೇಳಬೇಡಿರಿ. ಏಕೆಂದರೆ ನನ್ನ ಬಗ್ಗೆ ಅಲ್ಲಾಹನು ಹೆಚ್ಚು ಬಲ್ಲನು. ನನ್ನ ಜನಾಝದೊಂದಿಗೆ ಹೊರಡುವಾಗ ವೇಗವಾಗಿ ಹೆಜ್ಜೆ ಹಾಕಿರಿ. ದೇವನ ಸನ್ನಿಧಾನದಲ್ಲಿ ಒಳಿತಿದೆಯೆಂದಾದರೆ ಅದು ಬೇಗನೆ ನನಗೆ ಸಿಗುವಂತಾಗಲಿ. ಅದಲ್ಲದಿದ್ದರೆ ನೀವು ಹೊತ್ತಿರುವ ಕೆಡುಕಿನ ಭಾರವನ್ನು ಬೇಗನೇ ಕೆಳಗಿಳಿಸುವಂತಾಗಲಿ. (ಅತ್ತಬಖಾತುಲ್ ಕುಬ್ರ, ಸಂಪುಟ-3, ಪುಟ-273, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ನನ್ನ ಜನಾಝಕ್ಕೆ ಸ್ನಾನ ಮಾಡಿಸುವಾಗ ಕಸ್ತೂರಿ ಹಚ್ಚಬಾರದು ಎಂದೂ ಹಝ್ರತ್ ಉಮರ್(ರ) ವಸಿಯ್ಯತ್ ಮಾಡಿದ್ದಾಗಿ ಪ್ರಸ್ತಾಪ ಸಿಗುತ್ತದೆ. (ಅತ್ತಬಖಾತುಲ್ ಕುಬ್ರ, ಸಂಪುಟ-3, ಪುಟ-279, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್ ವರದಿ ಮಾಡುತ್ತಾರೆ: ನಾನು ಹಝ್ರತ್ ಉಮರರ ಬಳಿಗೆ ಹೋದೆನು. ಆ ಸಮಯದಲ್ಲಿ ಅವರ ತಲೆ ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರರ ಮಡಿಲಲ್ಲಿತ್ತು. ಹಝ್ರತ್ ಉಮರ್(ರ) ತನ್ನ ಮಗನಾದ ಅಬ್ದುಲ್ಲಾಹ್‌ರೊಡನೆ ಹೇಳಿದರು: ನನ್ನ ಶಿರವನ್ನು ನೆಲದಲ್ಲಿರಿಸು. ಹಝ್ರತ್ ಅಬ್ದುಲ್ಲಾಹ್ ಹೇಳಿದರು: ನನ್ನ ಮಡಿಲು ಮತ್ತು ನೆಲ ಸಮ ಸಮವಾಗಿವೆ. ಅದರ ನಡುವೆ ಹೆಚ್ಚು ಅಂತರವಿಲ್ಲ. ಆಗ ಹಝ್ರತ್ ಉಮರ್(ರ) ಎರಡು ಮೂರು ಸಲ ಒತ್ತಾಯಿಸಿ ಹೇಳಿದರು: ನಿನಗೆ ಒಳಿತಾಗಲಿ, ನನ್ನ ತಲೆಯನ್ನು ನೆಲದಲ್ಲಿರಿಸು. ಅನಂತರ ಹಝ್ರತ್ ಉಮರ್(ರ) ತನ್ನ ಎರಡು ಕಾಲುಗಳನ್ನು ಜೋಡಿಸಿದರು. ಅನಂತರ ಅವರು ಹೀಗೆ ಹೇಳುವುದನ್ನು ನಾನು ಕೇಳಿದೆ: ಅಲ್ಲಾಹನು ನನ್ನನ್ನು ಕ್ಷಮಿಸದಿದ್ದರೆ, ನನಗೆ ಮತ್ತು ನನ್ನ ತಾಯಿಗೆ ನಾಶ. ಅನಂತರ ಅವರು ನಿಧನರಾದರು. (ಅತ್ತಬಖಾತುಲ್ ಕುಬ್ರ, ಸಂಪುಟ-3, ಪುಟ-274-275, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ಸಮಾಕ್ ಹನ್‌ಫಿ ವರದಿ ಮಾಡುತ್ತಾರೆ. ಇಬ್ನು ಅಬ್ಬಾಸ್ ಹೀಗೆ ಹೇಳುವುದಾಗಿ ನಾನು ಕೇಳಿದೆ. ಹಝ್ರತ್ ಉಮರ್‌ರೊಡನೆ ನಾನು ಹೀಗೆ ಹೇಳಿದೆ: ಅಲ್ಲಾಹನು ನಿಮ್ಮ ಮೂಲಕ ಹೊಸ ಪಟ್ಟಣಗಳನ್ನು ನೆಲೆಸಿದ್ದನು. ನಿಮ್ಮ ಮೂಲಕ ಅನೇಕ ವಿಜಯಗಳನ್ನು ನೀಡಿದ್ದನು, ನಿಮ್ಮ ಮೂಲಕ ಅನೇಕ ಕೆಲಸಗಳು ನಡೆದುವು. ಆಗ ಹಝ್ರತ್ ಉಮರ್(ರ) ಹೇಳಿದರು: ನನಗೆ ಯಾವುದೇ ಪ್ರತಿಫಲವೂ ಬೇಡ ನನಗೆ ಯಾವುದೇ ಶಿಕ್ಷೆಯೂ ಬೇಡ ಎಂದಾಗಿದೆ ನನ್ನ ಬಯಕೆ. ಎಂದರೆ, ದೊಡ್ಡ ದೊಡ್ಡ ಕೆಲಸ ಮಾಡಿದ್ದೇನೆ, ವಿಜಯಗಳು ಉಂಟಾಗಿವೆ ಎಂಬ ಹೆಮ್ಮೆ ಅವರಿಗೆ ಇರಲಿಲ್ಲ. ಬದಲಿಗೆ ಅಲ್ಲಾಹನ ಭಯ ಮತ್ತು ದೇವಭಕ್ತಿ ಅವರಿಗೆ ಇತ್ತು. ಪರಲೋಕದ ಚಿಂತೆ ಅವರಿಗೆ ಇತ್ತು.

ಝೈದ್ ಬಿನ್ ಅಸ್ಲಂ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಉಮರ್(ರ) ಮರಣಾಸನ್ನರಾದಾಗ ಅವರು ಹೇಳಿದರು: ನೀವು ಆಡಳಿತದ ಬಗ್ಗೆ ನನ್ನನ್ನು ಸಂಶಯಿಸುತ್ತೀರಿ. ಅಲ್ಲಾಹನಾಣೆ, ನನಗೆ ಶಿಕ್ಷೆಯೂ ಸಿಗದಿರಲಿ, ನನಗೆ ಯಾವುದೇ ಪ್ರತಿಫಲವೂ ಬೇಡ ಎಂಬ ರೀತಿಯಲ್ಲಿ ನನಗೆ ಮುಕ್ತಿ ಸಿಗಲಿ ಎಂದಾಗಿದೆ ನನ್ನ ಇಚ್ಛೆ.
(ಅತ್ತಬಖಾತುಲ್ ಕುಬ್ರ, ಲಿಇಬ್ನೆ ಸಅದ್, ಭಾಗ-3, ಪುಟ-267, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ಮುಸ್ಲಿಹ್ ಮೌಊದ್(ರ) ಇದರ ಬಗ್ಗೆ ಹೇಳುತ್ತಾರೆ:

ಹಝ್ರತ್ ಉಮರ್‌ರಂತಹ ವ್ಯಕ್ತಿ ತನ್ನ ಸಂಪೂರ್ಣ ಜೀವಿತವನ್ನು ಇಸ್ಲಾಂ ಧರ್ಮದ ಬಗ್ಗೆಗಿನ ಚಿಂತೆ ಮತ್ತು ದುಃಖದಲ್ಲಿ ಕಳೆದಿದ್ದರು. ಅವರು ಪ್ರತಿಯೊಂದು ಸಂದರ್ಭದಲ್ಲಿ ಅತ್ಯುನ್ನತ ತ್ಯಾಗಗಳನ್ನು ಮಾಡಿದ್ದರು. ಬಾಹ್ಯವಾಗಿ ಅವರ ತ್ಯಾಗಗಳು ಹಝ್ರತ್ ಅಬೂಬಕರರ ತ್ಯಾಗದ ಮಟ್ಟಕ್ಕೆ ತಲುಪಿರಲಿಲ್ಲವಾದರೂ ನಿರ್ಧಾರ ಮತ್ತು ಸದುದ್ದೇಶದ ದೃಷ್ಟಿಯಲ್ಲಿ ಅವರ ತ್ಯಾಗಗಳಿಗೆ ಸಮಾನವಾಗಿತ್ತು. ಹಝ್ರತ್ ಅಬೂಬಕರ್(ರ) ನಿಧನರಾದಾಗ ಹಝ್ರತ್ ಉಮರ್‌ರ ಕಣ್ಣುಗಳು ತೇವಗೊಂಡುವು. ಅವರು ಹೇಳಿದರು: ಅಲ್ಲಾಹನು ಅಬೂಬಕರ್‌ರನ್ನು ಅನುಗ್ರಹಿಸಲಿ. ಅವರಿಗಿಂತ ಮುಂದಾಗಲು ನಾನು ಅನೇಕ ಬಾರಿ ಪ್ರಯತ್ನಿಸಿದ್ದೆ. ಆದರೆ ನನಗೆ ಯಶಸ್ಸು ಸಿಗಲಿಲ್ಲ. ಒಂದು ಬಾರಿ ಹಝ್ರತ್ ಪೈಗಂಬರ್(ಸ) ಸಂಪತ್ತನ್ನು ತರಲು ಹೇಳಿದರು. ನಾನು ನನ್ನ ಬಳಿಯಿದ್ದ ಸಂಪತ್ತಿನ ಅರ್ಧದಷ್ಟನ್ನು ತಂದೆನು. ಇಂದು ನಾನು ಅಬೂಬಕ್ರ್‌ಗಿಂತ ಮಿಗಿಲಾಗುವೆನು ಎಂದು ಭಾವಿಸಿದ್ದೆ. ಆದರೆ ಹಝ್ರತ್ ಅಬೂಬಕ್ರ್(ರ) ನನಗಿಂತ ಮುಂಚೆ ಅಲ್ಲಿಗೆ ತಲುಪಿದರು. ಹಝ್ರತ್ ಅಬೂಬಕರ್‌ರೊಂದಿಗೆ ಹಝ್ರತ್ ಪೈಗಂಬರ್‌ರಿಗೆ ನಿಕಟ ಸಂಬಂಧವೂ ಇತ್ತು. ಅವರು ಏನನ್ನು ಬಿಟ್ಟು ಬಂದಿರಲಿಕ್ಕಿಲ್ಲವೆಂದು ಅವರ ಬಗ್ಗೆ ಪೈಗಂಬರ್‌ರಿಗೆ ಚೆನ್ನಾಗಿ ಗೊತ್ತಿತ್ತು. ಆದ್ದರಿಂದ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಹೀಗೆ ಕೇಳಿದರು: ಅಬೂಬಕ್ರ್, ಮನೆಯಲ್ಲಿ ಏನು ಬಿಟ್ಟುಬಂದಿದ್ದೀಯ? ಅವರು ಹೇಳಿದರು: ಮನೆಯಲ್ಲಿ ಅಲ್ಲಾಹ್

ಮತ್ತು ಪ್ರವಾದಿಯ ಹೆಸರನ್ನು ಬಿಟ್ಟು ಬಂದಿದ್ದೇನೆ. ಈ ಘಟನೆಯನ್ನು ವಿವರಿಸುತ್ತಾ ಹಝ್ರತ್ ಉಮರ್(ರ) ಅಳುತ್ತಾ ಹೇಳುತ್ತಾರೆ: ಆಗಲೂ ನನಗೆ ಅವರಿಗಿಂತ ಮಿಗಿಲಾಗಲು ಸಾಧ್ಯವಾಗಲಿಲ್ಲ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಇದಾಗಿದ್ದುವು ಅವರ ತ್ಯಾಗಗಳು. ಹಝ್ರತ್ ಅಬೂಬಕರ್(ರ) ಮೊದಲು ಸಹ ನೀಡುತ್ತಿದ್ದರು. ಆದರೆ ವಿಶೇಷ ಸಂದರ್ಭ ಬಂದಾಗ ಎಲ್ಲವೂ ತಂದು ಮುಂದಿಟ್ಟರು. ಒಂದೆಡೆ ಇಂತಹ ಜನರು, ಮತ್ತೊಂದೆಡೆ ಕೆಲವರಿಗೆ ತನ್ನ ಸಂಪತ್ತಿನ ಹತ್ತನೇ ಒಂದು ಭಾಗವನ್ನು ಸಹ ತ್ಯಾಗವಮಾಡುವ ಸಂದರ್ಭ ಸಿಗುವುದಿಲ್ಲ. ಆದರೂ ನಾವು ಲೂಟಿಯಾಗಲ್ಪಟ್ಟವು ಎಂದು ಹೇಳುತ್ತಿರುತ್ತಾರೆ. ಹಝ್ರತ್ ಉಮರ್ರ(ರ) ಮರಣ ಸಮೀಪವಾದಾಗ, ಅವರು ಕಣ್ಣುಗಳು ಪದೇ ಪದೇ ತೇವಗೊಳ್ಳುತ್ತಿದ್ದುವು ಮತ್ತು ಹೀಗೆ ಹೇಳುತ್ತಿದ್ದರು: ನನ್ನ ದೇವಾ, ನಾನು ಯಾವುದೇ ಪ್ರತಿಫಲಕ್ಕೆ ಅರ್ಹನಲ್ಲ. ನಾನು ಶಿಕ್ಷೆಯಿಂದ ಪಾರಾಗಲಿ ಎಂದು ಮಾತ್ರ ನಾನು ಬಯಸುತ್ತೇನೆ. (ಖುತ್‌ಬಾತೆ ಮಹ್ಮೂದ್, ಸಂಪುಟ–10, ಪುಟ–24)

ಅವರ ಮಗನಾದ ಹಝ್ರತ್ ಅಬ್ದುಲ್ಲಾಹ್ ಅವರ ಜನಾಝದ ಸ್ನಾನ ಮಾಡಿಸಿದರು. ಮಸ್ಜಿದ್ ನಬವಿಯಲ್ಲಿ ಅವರ ಜನಾಝ ನಮಾಝ್ ನಿರ್ವಹಿಸಲಾಯಿತು ಎಂದು ಹಝ್ರತ್ ಇಬ್ನ್ ಉಮರ್‌ರಿಂದ ವರದಿಯಾಗಿದೆ. ಹಝ್ರತ್ ಉಮರರ(ರ) ಜನಾಝ ನಮಾಝ್ ಹಝ್ರತ್ ಸುಹೈಬ್ ನಿರ್ವಹಿಸಿದ್ದರು. ಅವರ ಜನಾಝ ನಮಾಝನ್ನು ಹಝ್ರತ್ ಪೈಗಂಬರರ(ಸ) ಪ್ರವಚನ ಪೀಠ ಮತ್ತು ಅನುಗ್ರಹೀತ ಖಬರಿನ ನಡುವೆ ನಿರ್ವಹಿಸಲಾಯಿತು. ಅವರನ್ನು ಖಬರಿಗೆ ಇಳಿಸುವವರಲ್ಲಿ ಹಝ್ರತ್ ಉಸ್ಮಾನ್(ರ), ಹಝ್ರತ್ ಸಈದ್ ಬಿನ್ ಝೈದ್(ರ), ಸುಹೈಬ್ ಬಿನ್ ಸನಾನ್(ರ), ಹಝ್ರತ್ ಅಲಿ(ರ), ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ), ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ), ಹಝ್ರತ್ ತಲ್‌ಹ(ರ) ಮತ್ತು ಹಝ್ರತ್ ಝುಬೇರ್ ಬಿನ್ ಅವಾಂ ಇದ್ದರು ಎಂದು ಹಝ್ರತ್ ಜಾಬಿರ್‌ರಿಂದ ವರದಿಯಾಗಿದೆ. (ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–279–281, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990) (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–4, ಪುಟ–166, ದಾರುಲ್ ಕುತುಬ್ ಇಲ್‌ಮಿಯ ಬೈರೂತ್, 2003 ಪ್ರಕಟಣೆ)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸಜ್ಜನರ ಸಮೀಪ ದಫನ್ ಆಗುವುದು ಸಹ ಒಂದು ವರದಾನವಾಗಿದೆ. ಮರಣಾಸನ್ನರಾದಾಗ ಹಝ್ರತ್ ಪೈಗಂಬರರ(ಸ) ಸಮೀಪ ಖಬರಿನ ಜಾಗ ಕೊಡಬೇಕೆಂಬ ವಿನಂತಿಯೊಂದಿಗೆ ಹಝ್ರತ್ ಆಇಶರ(ರ) ಸನ್ನಿಧಿಗೆ ಹಝ್ರತ್ ಉಮರ್(ರ) ಮಗನನ್ನು ಕಳುಹಿಸಿದರು. ಹಝ್ರತ್ ಆಇಶ(ರ) ತ್ಯಾಗ ಮನೋಭಾವದಿಂದ ಆ ಜಾಗವನ್ನು ಅವರಿಗೆ ಕೊಟ್ಟರು. ಆಗ ಹಝ್ರತ್ ಉಮರ್(ರ) ಹೇಳಿದರು: **ಮಾ ಬಖಿಯ ಲೀ ಹಮ್ಮುನ್ ಬಅ್‌ದ ಧ್ಹಾಲಿಕ್**. ಎಂದರೆ, ಹಝ್ರತ್ ಪೈಗಂಬರರ(ಸ) ಖಬರಿನ ಬಳಿ ದಫನ್‌ಗೊಳ್ಳುವ ಸೌಭಾಗ್ಯ ಸಿಗುವುದೇ ಎಂಬ ಚಿಂತೆಗೆ ಪರಿಹಾರ ಲಭಿಸಿದ ನಂತರ ಈಗ ನನಗೆ ಯಾವುದೇ ಬೇರೆ ದುಃಖವಿಲ್ಲ. (ಮಲ್‌ಫುಝಾತ್, ಸಂಪುಟ–8, ಪುಟ–286)

ಇನ್ನೊಂದೆಡೆ ಹಝ್ರತ್ ಮಸೀಹ್ ಮೌಊದ್(ರ) ಹೇಳುತ್ತಾರೆ:

ಸಂಪೂರ್ಣ ಅಸಕ್ತಿಯಿಂದ ಅಲ್ಲಾಹನೊಂದಿಗೆ ಹೊಂದಿಕೊಳ್ಳುವ ವ್ಯಕ್ತಿಯನ್ನು ಅಲ್ಲಾಹನು ವ್ಯರ್ಥಗೊಳಿಸುವುದಿಲ್ಲ. ಲೋಕದ ಪ್ರತಿಯೊಬ್ಬರು ಅವನ ಶತ್ರುವಾದರು ಕೂಡ. ಅಲ್ಲಾಹನ ದಾಸ ಯಾವುದೇ ನಷ್ಟ ಮತ್ತು ಕಷ್ಟತೆಯನ್ನು ಅನುಭವಿಸುವುದಿಲ್ಲ. ಅಲ್ಲಾಹನು ಸತ್ಯಸಂಧರನ್ನು ಸಹಾಯ ಮಾಡದೇ ಬಿಡುವುದಿಲ್ಲ. ಅಲ್ಲಾಹು ಅಕ್ಬರ್. ಅಬೂಬಕರ್ ಮತ್ತು ಉಮರರ ಸತ್ಯಸಂಧತೆ ಹಾಗೂ ನಿಷ್ಠೆಯ ಮಟ್ಟ ಬಹಳ ಉನ್ನತವಾಗಿತ್ತು. ಅವರಿಬ್ಬರೂ ಬಹಳ ಅನುಗ್ರಹೀತ ಸ್ಥಳದಲ್ಲಿ ದಫನ್ ಆದರು. ಮೂಸಾ ಮತ್ತು ಈಸಾ ಜೀವಂತವಾಗಿದ್ದರೆ, ಅವರು ಪೂರ್ಣ ಆಸಕ್ತಿಯಿಂದ ಅಲ್ಲಿ ದಫನ್ ಮಾಡಲ್ಪಡಲು ಬಯಸುತ್ತಿದ್ದರು. ಆದರೆ ಈ ಸ್ಥಾನ ಕೇವಲ ಅಭಿಲಾಷೆಯಿಂದ ಸಿಗುವುದಿಲ್ಲ. ಬದಲಾಗಿ ಅದು ಅತ್ಯುನ್ನತನಾದ ಅಲ್ಲಾಹನ ಕಡೆಯಿಂದ ಒಂದು ಅನಂತವಾದ ಕೃಪೆಯಾಗಿದೆ. ಯಾರ ಪರವಾಗಿ ಅನಾದಿಯಿಂದಲೇ ದೈವಿಕ ಅನುಗ್ರಹಗಳು ಇರುತ್ತವೋ ಅವರಿಗೆ ಮಾತ್ರ ಈ ವರದಾನ ಲಭಿಸುತ್ತದೆ. (ಸಿರ್ರುಲ್ ಖಿಲಾಫ, ರೂಹಾನಿ ಖಝಾಈನ್, ಸಂಪುಟ–8, ಪುಟ–346, ಉರ್ದು ಅನುವಾದ ಪುಟ–78)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರರ(ರ) ಸಮೀಪ ಜಾಗ ಸಿಗಬೇಕು ಎಂಬ ವ್ಯಾಕುಲತೆ ಹಝ್ರತ್ ಉಮರ್‌ರಿಗೆ(ರ) ಮರಣ ಸಮಯದಲ್ಲಿ ಬಹಳವಿತ್ತು. ಹಝ್ರತ್ ಪೈಗಂಬರರ(ಸ) ಸಮೀಪ ದಫನ್ ಆಗಲು ಅನುಮತಿ ಪಡೆಯಲು ಹಝ್ರತ್ ಆಇಶರ ಬಳಿಗೆ ಹಝ್ರತ್ ಉಮರ್(ರ) ಮಗನನ್ನು ಕಳುಹಿಸಿದರು. ಲೋಕದಲ್ಲಿ ಯಾರೂ ಆಳಿರದಂತಹ ಆಡಳಿತವನ್ನು ಹಝ್ರತ್ ಉಮರ್(ರ) ನಡೆಸಿದರು ಎಂದು ಅವರ ಬಗ್ಗೆ ಕ್ರೈಸ್ತ ಚರಿತ್ರೆಗಾರರು ಕೂಡ ಬರೆಯುತ್ತಾರೆ. ಕ್ರೈಸ್ತ ಚರಿತ್ರೆಗಾರರು ಹಝ್ರತ್ ಪೈಗಂಬರ್‌ರನ್ನು(ಸ) ಬೈಯ್ಯುತ್ತಾರೆ. ಆದರೆ ಹಝ್ರತ್ ಉಮರ್‌ರನ್ನು(ರ) ಹೊಗಳುತ್ತಾರೆ. ಅಂತಹ ವ್ಯಕ್ತಿ, ಸದಾ ಹಝ್ರತ್ ಪೈಗಂಬರರ(ಸ) ಸಹವಾಸದಲ್ಲಿ ಇದ್ದ ವ್ಯಕ್ತಿ ಮರಣ ಸಮಯದಲ್ಲೂ ಹಝ್ರತ್ ಪೈಗಂಬರರ(ಸ) ಖಬರಿನ ಸಮೀಪ ಜಾಗ ಸಿಗಬೇಕೆಂಬ ಅಭಿಲಾಷೆಯನ್ನು ಇರಿಸುತ್ತಾರೆ. ಹಝ್ರತ್ ಪೈಗಂಬರ್‌ರ(ಸ) ಯಾವುದೇ ಕೃತ್ಯದಿಂದ ಅವರು ಅಲ್ಲಾಹನ ಸಂಪ್ರೀತಿಗಾಗಿ ಕೆಲಸ ಮಾಡುವವರಲ್ಲವೆಂದು ಹಝ್ರತ್ ಉಮರ್‌ರಿಗೆ ಅನಿಸಿದ್ದರೆ, ಅವರು ಹಝ್ರತ್ ಪೈಗಂಬರರ(ಸ) ಪಾದದ ಬಳಿ ಜಾಗ ಲಭಿಸಲು ಬಯಸುತ್ತಿದ್ದರೇ? (ದುನಿಯು ಕಾ ಮುಹ್ಸಿನ್, ಅನ್ವಾರುಲ್ ಉಲೂಮ್, ಸಂಪುಟ–10, ಪುಟ–262)

ಸಹೀಹ್ ಮುಸ್ಲಿಮ್ ಮತ್ತು ತಿರ್ಮಿಧಿಯ ವರದಿಯ ಪ್ರಕಾರ ಮರಣ ಸಮಯದಲ್ಲಿ ಹಝ್ರತ್ ಉಮರರಿಗೆ(ರ) 63 ವಯಸ್ಸಾಗಿತ್ತು. ಮರಣ ಸಮಯದಲ್ಲಿ ಹಝ್ರತ್ ಪೈಗಂಬರರ(ಸ) ಪ್ರಾಯ 63 ಆಗಿತ್ತು, ಹಝ್ರತ್ ಅಬೂಬಕರ್(ರ) ಮೃತಪಟ್ಟಾಗ ಅವರಿಗೆ 63 ವಯಸ್ಸಾಗಿತ್ತು ಮತ್ತು ಹಝ್ರತ್ ಉಮರ್‌ರ ಪ್ರಾಯ ಸಹ ಮರಣ ಸಮಯದಲ್ಲಿ 63 ಆಗಿತ್ತು ಎಂದು ಹಝ್ರತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ.

(ಸಹೀಹ್ ಮುಸ್ಲಿಮ್, ಕಿತಾಬುಲ್ ಫಝಾಎಲ್, ಹದೀಸ್–6091) (ಸುನನ್ ಅತ್ತಿರ್‌ಮಿಧಿ, ಕಿತಾಬುಲ್ ಮನಾಖಿಬ್, ಹದೀಸ್–3653)

ಹಝ್ರತ್ ಇಬ್ನ್ ಅಬ್ಬಾಸ್(ರ) ವರದಿ ಮಾಡುತ್ತಾರೆ; ಹಝ್ರತ್ ಉಮರರ ಅನುಗ್ರಹೀತ ಮೃತದೇಹವನ್ನು ಜನಾಝಗಾಗಿ ಇರಿಸಲಾಯಿತು. ಜನರು ಅವರ ಸುತ್ತ ನಿಂತರು. ಅವರ ಮೃತದೇಹವನ್ನು ಎತ್ತುವುದಕ್ಕೆ ಮುಂದೆ ದುಆ ಮಾಡಿದರು. ಅನಂತರ ಜನಾಝ ನಮಾಝ್ ನಿರ್ವಹಿಸಿದರು. ನಾನು ಸಹ ಅವರಲ್ಲಿ ಉಪಸ್ಥಿತನಿದ್ದೆ. ಒಬ್ಬ ವ್ಯಕ್ತಿ ನನ್ನ ತೋಳನ್ನು ಹಿಡಿದು ಅಲುಗಾಡಿಸಿದರು. ಅವರು ಹಝ್ರತ್ ಅಲಿ ಬಿನ್ ಅಬೂತಾಲಿಬ್ ಆಗಿದ್ದರು ಎಂದು ನಾನು ನೋಡಿದೆ. ಅವರು ಹಝ್ರತ್ ಉಮರ್‌ರಿಗಾಗಿ ಕಾರುಣ್ಯದ ದುಆ ಮಾಡಿದರು ಅನಂತರ ಹಝ್ರತ್ ಉಮರರ(ರ) ಪರಿಶುದ್ಧ ಮೃತದೇಹದ ತಲೆಭಾಗದಲ್ಲಿ ನಿಂತುಕೊಂಡು ಹಝ್ರತ್ ಅಲಿ(ರ) ಹೇಳಿದರು: ನೀವು ಮಾಡಿದಂತಹ ಕೃತ್ಯಗಳನ್ನು ಮಾಡಬೇಕೆಂಬ ನೆಲೆಯಲ್ಲಿ ನನಗೆ ನಿಮಗಿಂತ ಪ್ರಿಯರಾದ ಬೇರೆ ವ್ಯಕ್ತಿಯಿಲ್ಲ. ಈ ಚಾದರದಲ್ಲಿ ಹೊದಿಯಲ್ಪಟ್ಟ ವ್ಯಕ್ತಿಗಿಂತ ಪ್ರಿಯ ವ್ಯಕ್ತಿ ನನಗೆ ಇಹಲೋಕದಲ್ಲಿ ಬೇರೆ ಯಾರೂ ಇಲ್ಲ. ಅಲ್ಲಾಹನಾಣೆ, ಹಝ್ರತ್ ಉಮರ್‌ರನ್ನು ಅಲ್ಲಾಹನು ಅವರ ಸಂಗಡಿಗರೊಡನೆ ಇರಿಸುವನು ಎಂದು ನನಗೆ ಭರವಸೆಯಿದೆ. ಹಝ್ರತ್ ಪೈಗಂಬರ್(ಸ) ಅನೇಕ ಬಾರಿ ಹೀಗೆ ಹೇಳಿದ್ದಾಗಿ ನಾನು ಕೇಳಿದ್ದೇನೆ: ನಾನು, ಅಬೂಬಕ್ರ್ ಮತ್ತು ಉಮರ್ ಪ್ರವೇಶಿಸಿದೆವು; ನಾನು ಮತ್ತು ಅಬೂಬಕ್ರ್ ಹಾಗೂ ಉಮರ್ ಹೊರಟೆವು. ಎಂದರೆ, ಹೀಗೆ ವಿವಿಧ ವಾಕ್ಯಗಳನ್ನು ಹೇಳುತ್ತಿದ್ದರು. (ಸಹೀಹ್ ಬುಖಾರಿ, ಕಿತಾಬ್ ಫಝಾಎಲುಸ್ಸಹಾಬ(ಸ) ಹದೀಸ್–3685)

ಹೀಗೆ ಆರಂಭಿಸುತ್ತಾ ಅನೇಕ ಘಟನೆಗಳನ್ನು ವಿವರಿಸುತ್ತಿದ್ದರು.

ಜಾಫರ್ ಬಿನ್ ಮುಹಮ್ಮದ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಉಮರ್ ಬಿನ್ ಖ಼ತ್ತಾಬ್‌ರ ಜನಾಝದ ಸ್ನಾನ ಮತ್ತು ಕಫನ್ ಹೊದಿಸಿದ ನಂತರ ಅವರ ಜನಾಝವನ್ನು ಮಂಚದಲ್ಲಿ ಮಲಗಿಸಲಾಯಿತು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸದ್, ಭಾಗ–3, ಪುಟ–282, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಅಬೂ ಮಖ್‌ಲದ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರರು ಇದ್ದಾಗಲೇ ಹಝ್ರತ್ ಪೈಗಂಬರ್‌ರ ನಂತರ ಹಝ್ರತ್ ಅಬೂಬಕರ್ ನಮ್ಮಲ್ಲಿ ಶ್ರೇಷ್ಠರಾಗಿರುವರು ಎಂದು ನಮಗೆ ಮನವರಿಕೆಯಾಗಿತ್ತು. ಹಝ್ರತ್ ಅಬೂಬಕರ್ ನಿಧನರಾಗುವುದಕ್ಕೆ ಮುಂಚೆ, ಅವರ ನಂತರ ಹಝ್ರತ್ ಉಮರ್ ನಮ್ಮಲ್ಲಿ ಶ್ರೇಷ್ಠರು ಎಂದು ನಮಗೆ ಗೊತ್ತಾಗಿತ್ತು. (ಸೀರತ್ ಉಮರ್ ಬಿನ್ ಖತ್ತಾಬ್, ಇಬ್ನ್ ಜೂಝಿ, ಪುಟ–212, ಮಿಸ್ರಿಯ ಅಲ್‌ಅಝ್‌ಹರ್)

ಹಝ್ರತ್ ಉಮರ್(ರ) ನಿಧನರಾದಾಗ ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ) ಹೇಳಿದರು: ಅವರು ಇಸ್ಲಾಮಿಗಾಗಿ ಒಂದು ಸುದೃಢವಾದ ಕೋಟೆಯಾಗಿದ್ದರು. ಜನರು ಅದರಲ್ಲಿ ಪ್ರವೇಶಿಸುತ್ತಿದ್ದರು ಮತ್ತು ಅದರಿಂದ ಹೊರಗೆ ಬರುತ್ತಿರಲಿಲ್ಲ. ಆದರೆ ಅವರ ಮರಣದಿಂದ ಆ ಕೋಟೆ ಬಿರುಕು ಬಿಟ್ಟಿದೆ. ಜನರು ಈಗ ಇಸ್ಲಾಮಿನಂದ ಹೊರಗೆ ಹೋಗುತ್ತಿದ್ದಾರೆ. ಅವರ ಅರಿವನ್ನು ತಕ್ಕಡಿಯ ಒಂದು ತಟ್ಟೆಯಲ್ಲಿ ಇರಿಸಿ

ಮತ್ತೊಂದು ತಟ್ಟೆಯಲ್ಲಿ ಉಳಿದ ಎಲ್ಲ ಮನುಷ್ಯರ ಅರಿವನ್ನು ಇರಿಸಿದ್ದರೆ ಹಝ್ರ್ರತ್ ಉಮರರ(ರ) ತಟ್ಟೆ ಭಾರವುಳ್ಳದ್ದಾಗಿರುವುದು. ಹಝ್ರ್ರತ್ ಉಮರರ ಮರಣದಿಂದ ಜ್ಞಾನದ ಹತ್ತನೇ ಒಂಬತ್ತು ಭಾಗಗಳು ನಷ್ಟವಾದುವು.

(ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–3, ಪುಟ–651, ದಾರುಲ್ ಫಿಕರ್ ಬೈರೂತ್ 2003)

ಹಝ್ರ್ರತ್ ಅಬೂತಲ್‌ಹ ಹೇಳುತ್ತಾರೆ: ಹಝ್ರ್ರತ್ ಉಮರರ ಶಹಾದತಿನಿಂದ ಅರೇಬಿಯದ ಪ್ರತಿಯೊಬ್ಬ ನಗರವಾಸಿ ಮತ್ತು ಗ್ರಾಮೀಣ ವಾಸಿಯ ಮನೆಗಳಿಗೆ ನಷ್ಟವುಂಟಾಗಿದೆ. (ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–285, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990) ಎಂದರೆ ಪ್ರತಿಯೊಬ್ಬರಿಗೂ ಅವರ ನೆರವು ಸಿಗುತ್ತಿತ್ತು. ಹಝ್ರ್ರತ್ ಹುಧೈಫ ಹೇಳುತ್ತಾರೆ: ಹಝ್ರ್ರತ್ ಉಮರರ(ರ) ಕಾಲಘಟ್ಟದ ಇಸ್ಲಾಮಿನ ಉದಾಹರಣೆ, ನಿರಂತರವಾಗಿ ಅಭಿವೃದ್ಧಿಯ ಮಾರ್ಗದಲ್ಲಿ ಹೋಗುತ್ತಿರುವ ಒಬ್ಬ ವ್ಯಕ್ತಿಯ ಹಾಗೆ ಆಗಿತ್ತು ಎಂದು ಹೇಳಬಹುದು.

ಹಝ್ರ್ರತ್ ಅಬ್ದುಲ್ಲಾಹ್ ಬಿನ್ ಸಲಾಂ ಹೇಳುತ್ತಾರೆ: ಹಝ್ರ್ರತ್ ಉಮರ್(ರ) ಸತ್ಯದ ಪರವಾಗಿ ಉದಾರಿಯೂ ಮತ್ತು ಅಸತ್ಯದ ಪರವಾಗಿ ಜಿಪುಣರೂ ಆಗಿದ್ದರು. ಹಝ್ರ್ರತ್ ಉಮರ್(ರ) ನಿಧನರಾದಾಗ ಝೈದ್(ರ) ಅಳುತ್ತಾ ಹೇಳಿದರು: ಹಝ್ರ್ರತ್ ಉಮರರ(ರ) ಮರಣದಿಂದ ಇಸ್ಲಾಮಿಗೆ ಉಂಟಾದ ಹಾನಿಯನ್ನು ಕೊನೆಗಾಲದ ವರೆಗೂ ಭರ್ತಿ ಮಾಡಲು ಸಾಧ್ಯವಲ್ಲ. (ಅತ್ತಖಾತುಲ್ ಕುಬ್ರ ಲಿಇಬ್ನೆ ಸದ್, ಭಾಗ–3, ಪುಟ–282, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರ್ರತ್ ಉಮರ್(ರ) ಬೇರೆ ಬೇರೆ ಸಮಯಗಳಲ್ಲಿ ಹತ್ತು ವಿವಾಹಗಳನ್ನು ಮಾಡಿದ್ದರು. ಅವರಿಗೆ 9 ಪುತ್ರರು ಮತ್ತು 4 ಪುತ್ರಿಯರು ಇದ್ದರು. ಅವರಲ್ಲಿ ಒಬ್ಬರು ಹಝ್ರತ್ ಹಫ್ಸ(ರ) ಆಗಿದ್ದರು ಅವರು ಪ್ರವಾದಿ(ಸ)ರವರ ಮಡದಿ ಆಗಿದ್ದರು, ಹಝ್ರತ್ ಝೈನಬ್ ಬಿನ್ತ್ ಮಝ್‌ಊನ್(ರ) ಮೋದಲನೇಯ ಪತ್ನಿಯಾಗಿದ್ದರು, ಇವರು ಹಝ್ರತ್ ಉಸ್ಮಾನ್ ಬಿನ್ ಮಝ್‌ಊನ್(ರ)ರವರ ಸಹೋದರಿ ಆಗಿದ್ದರು ಅವರಿಂದ ಅಬ್ದುಲ್ಲಾಹ್, ಅಬ್ದುರ್ರಹ್ಮಾನ್ ಅಕ್ಬರ್ ಮತ್ತು ಹಝ್ರತ್ ಹಫ್ಸ(ರ) ಮಕ್ಕಳು ಜನಿಸಿದರು. ಹಝ್ರತ್ ಉಮ್ಮೆ ಕುಲ್‌ಸೂಮ್ ಬಿನ್ತ್ ಅಲಿ ಬಿನ್ ಅಬೂ ತಲಿಬ್: ಅವರಿಂದ ಝೈದ್ ಅಕ್ಬರ್ ಮತ್ತು ರುಖೈಯ ಜನಿಸಿದ್ದರು. ಮುಲೈಕ ಬಿನ್ತ್ ಜರ್‌ವಲ್: ಅವರಿಗೆ ಉಮ್ಮೆ ಕುಲ್ಸೂಮ್ ಎಂದು ಕರೆಯುತ್ತಿದ್ದರು. ಇವರಿಂದ ಝೈದ್ ಅಸ್ಗರ್ ಮತ್ತು ಉಬೈದುಲ್ಲಾಹ್ ಜನಿಸಿದರು. ರುಖೈಯ ಬಿನ್ತ್ ಅಬೂ ಉಮಯ್ಯ ಮಖ್ಝುಮಿ: ಮುಲೈಕ ಹಾಗೂ ಖುರೈನ ಈಮಾನ್ ತರದ ಕಾರಣ ಹಝ್ರತ್ ಉಮರ್(ರ)ರವರು ವರಿಬ್ಬರನ್ನು 6 ಹಿಜರಿಯಲ್ಲಿ ತಲಾಖ್(ವಿಚ್ಛೆದನೆ) ನೀಡಿದರು. ಹಝ್ರತ್ ಜಮೀಲ ಬಿನ್ತ್ ಸಾಬಿತ್: ಇವರ ಹೆಸರು ಆಸಿಯ ಎಂದಾಗಿತ್ತು ಪ್ರವಾದಿ(ಸ)ರವರು ಅವರ ಹೆಸರನ್ನು ಬದಲಾಯಿಸಿ ಜಮೀಲ ಎಂದು ಹೆಸರಿಸಿದರು. ಇವರು ಬದರಿ ಸಹಾಬಿಯಾಗಿದ್ದ ಆಸಿಮ್ ಬಿನ್ ಸಾಬಿತ್ ಅವರ ಸಹೋದರಿಯಾಗಿದ್ದರು. ಇವರಿಂದ ಆಸಿಮ್‌ರವರು ಜನಿಸಿದರು. ಲುಹೈಯ್ಯರವರಿಂದ ಅಬ್ದುರ್ರಹ್ಮಾನ್ ಔಸತ್‌ರವರು ಜನಿಸಿದರು.

(ಅಲ್‌ಖುಲಫಾಉ ರಾಶಿದೂನ್, ಮುಹಮ್ಮದ್ ರಿಝಾ, ಪುಟ–100, ದಾರುಲ್ ಕುತುಬ್ ಅಲ್ ಅರಬಿ ಬೈರೂತ್ 2004) (ಅಲ್‌ಫಾರೂಖ್, ಶಿಬ್ಲಿ ನುಮಾನಿ, ಪುಟ–404, ದರುಲ್ ಇಶಾಅತ್ ಕರಾಚಿ 1991) (ಅಸದುಲ್ ಗಾಬ, ಸಂಪುಟ–7, ಪುಟ53, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003)

ಪ್ರಸಿದ್ಧ ಪೌರಸ್ತ್ಯ ಲೇಖಕ ಎಡ್ವರ್ಡ್ ಗಿಬ್ಬನ್ ಬರೆಯುತ್ತಾರೆ: ಹಝ್ರ್ರತ್ ಉಮರರ(ರ) ದೇವಭಕ್ತಿ ಮತ್ತು ವಿನಯವಂತಿಕೆ ಹಝ್ರ್ರತ್ ಅಬೂಬಕರ್‌ಗಿಂತ(ರ) ಕಡಿಮೆಯೇನೂ ಆಗಿರಲಿಲ್ಲ. ಅವರ ಆಹಾರದಲ್ಲಿ ಜೋಳದ ರೊಟ್ಟಿ ಮತ್ತು ಖರ್ಜೂರಗಳೇ ಇರುತ್ತಿದ್ದುವು. ನೀರು ಅವರ ಪಾನೀಯವಾಗಿತ್ತು. (The decline and fall of the roman empire, br Edward Gibbon, Vol.3 chapter LI. Page 178, London)

ಮೈಕಲ್ ಎಚ್. ಹಾರ್ಟ್ ತನ್ನ ಪುಸ್ತಕವಾದ "ದಿ ಹಂಡ್ರೆಡ್"ನಲ್ಲಿ ಹಝ್ರ್ರತ್ ಉಮರರ(ರ) ಪ್ರಸ್ತಾಪ 52ನೇ ನಂಬರ್‌ನಲ್ಲಿ ಮಾಡಿರುವರು. ಅವರು ಬರೆಯುತ್ತಾರೆ: ಹಝ್ರ್ರತ್ ಉಮರ್ ಮುಸ್ಲಿಮರ ಅತ್ಯಂತ ಶ್ರೇಷ್ಠ ಖಲೀಫರಾಗಿದ್ದರು ಎಂದು ಹೇಳಬಹುದು. ಅವರು ಆರಂಭದಲ್ಲಿ ಹಝ್ರ್ರತ್ ಪೈಗಂಬರರ ಮತ್ತು ಅವರು ತಂದ ಹೊಸ ಧರ್ಮದ ಕಠಿಣ ಶತ್ರುಗಳಲ್ಲಿ ಒಬ್ಬರಾಗಿದ್ದರು. ಆದರೆ ಅಚಾನಕ್ಕಾಗಿ ಅವರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರು ಮತ್ತು ಹಝ್ರ್ರತ್ ಪೈಗಂಬರರ(ರ) ಪ್ರಬಲ ಸಹಾಯಕರಲ್ಲಿ ಒಬ್ಬರಾದರು. ಉಮರ್ ಹಝ್ರ್ರತ್ ಪೈಗಂಬರರ(ಸ) ನಿಕಟ ಸಲಹೆಗಾರರಾದರು.

ಉಮರ್ ಕ್ರಿ.ಶ. 634ರಲ್ಲಿ ಖಲೀಫರಾದರು ಮತ್ತು ಕ್ರಿ.ಶ. 644 ತನಕ ಖಿಲಾಫತ್ ಸ್ಥಾನದಲ್ಲಿದ್ದರು. ಅವರನ್ನು ಪೇರ್ಶಿಯದ ಒಬ್ಬ ಗುಲಾಮನು ಮದೀನದಲ್ಲಿ ಶಹೀದ್ ಮಾಡಿದನು. ಮರಣಾಸನ್ನವಾದಾಗ ಅವರು ಆರು ಸದಸ್ಯರ ಒಂದು ಸಮಿತಿಯನ್ನು ನಿಶ್ಚಯಿಸಿದರು. ಹಝ್ರ್ರತ್ ಉಮರರ ಹತ್ತು ವರ್ಷಗಳ ಖಿಲಾಫತ್ ಕಾಲಘಟ್ಟದಲ್ಲೇ ಅರೇಬಿಯರು ಅತ್ಯಂತ ಪ್ರಮುಖ ವಿಜಯಗಳನ್ನು ಗಳಿಸಿದ್ದರು. ಅವರ ಖಿಲಾಫತಿನ ಸ್ವಲ್ಪ ಕಾಲಾವಧಿಯಲ್ಲೇ ಅರೇಬಿಯ ಸೈನ್ಯವು ಸಿರಿಯ ಮತ್ತು ಪೆಲಸ್ತೀನಿನ ಮೇಲೆ ದಾಳಿ ನಡೆಸಿದರು. ಅವು ಆಗ ಬೈಝಂಟೀಣ್ ಆಡಳಿತದ ಭಾಗವಾಗಿತ್ತು. ಡಮಸ್ಕಸ್ ಸಹ ಅದೇ ವರ್ಷ ಜಯಿಸಲಾಯಿತು. ಜರುಸಲೇಂ ಸಹ ಎರಡು ವರ್ಷಗಳ ನಂತರ ಪರಾಜಯಗೊಂಡಿತು. 639ರಲ್ಲಿ ಅರಬ್ ಸೈನ್ಯ ಈಜಿಪ್ಟಿಗೆ ಪ್ರವೇಶಿಸಿತ್ತು. 637ರಲ್ಲಿ ಪ್ರಮುಖ ಯುದ್ಧವಾದ ಖಾದಿಸಿಯವನ್ನು ಜಯಿಸಲಾಯಿತು. 642ರಲ್ಲಿ ಇರಾನಿನ ಮೇಲೆ ಸಹ ದಾಳಿ ನಡೆಸಲಾಯಿತು. ಹಝ್ರ್ರತ್ ಉಮರರ ವಿಜಯಗಳ ವಿಸ್ತಾರ ಎಷ್ಟು ಪ್ರಮುಖವೋ ಅಷ್ಟೇ ಅವರ ವಿಜಯಗಳ ನೆಲೆನಿಲ್ಲುವಿಕೆ ಮತ್ತು ಭದ್ರತೆಯೂ ಮುಖ್ಯವಾದುದಾಗಿದೆ. ಉಮರರ ವಿಜಯಗಳು ನಿಸ್ಸಂಶಯವಾಗಿಯೂ ಪ್ರಭಾವಶಾಲಿಗಳಾಗಿವೆ. ಮುಹಮ್ಮದ್ ಪೈಗಂಬರರ(ಸ) ನಂತರ ಅವರು ಇಸ್ಲಾಮಿನ ಪ್ರಚಾರದಲ್ಲಿ ಪ್ರಧಾನ ವ್ಯಕ್ತಿಯಾಗಿದ್ದರು. ಉಮರರ ಕಾಲಘಟ್ಟದಲ್ಲಿ ಅರೇಬಿಯರ ವಿಜಯಗಳನ್ನು ಶಾರ್ಲೀಮನ್ ಮತ್ತು ಜೂಲಿಯಸ್ ಸೀಸರಿನ ವಿಜಯಗಳಿಗೆ ಹೋಲಿಸಿದರೆ, ಗಾತ್ರ ಮತ್ತು ಸಮಯ ಮಿತಿಯ ದೃಷ್ಟಿಯಲ್ಲಿ ಅವುಗಳು ಇವರಿಬ್ಬರ ವಿಜಯಗಳಿಗಿಂತ ಬಹಳ ಹೆಚ್ಚು ಪ್ರಧಾನವಾಗಿವೆ.

ಪ್ರೊಫೆಸರ್ ಫಿಲಿಪ್ ಕೆ. ಎಟಿ. ಬರೆಯುತ್ತಾರೆ: ಸರಳ, ಸಂತೃಪ್ತ ಮತ್ತು ಪೈಗಂಬರರ(ಸ) ಕ್ರಿಯಾಶೀಲ ಮತ್ತು ಯೋಗ್ಯ ಉತ್ತರಾಧಿಕಾರಿಯಾದ ಉಮರ್(ರ) ಉದ್ದ ಮತ್ತು ಗಟ್ಟಿ ಮೈಕಟ್ಟಿನ ವ್ಯಕ್ತಿಯಾಗಿದ್ದರು. ಅವರು ಒಬ್ಬ ಗ್ರಾಮೀಣ ವಾಸಿಯಂತೆ ಸರಳತೆಯಿಂದ ಜೀವನವನ್ನು ಸಾಗಿಸಿದರು. ಅವರ ಉನ್ನತ ಮತ್ತು ಶ್ರೇಷ್ಠ ನಡತೆ ಹಾಗೂ ಸ್ವಭಾವವು ಮನಸ್ಸಾಕ್ಷಿಯುಳ್ಳ ಎಲ್ಲ ಉತ್ತರಾಧಿಕಾರಿಗಳು ಅನುಸರಿಸಬೇಕಾದ ಮಾದರಿಯಾಗಿ ಬಿಟ್ಟಿದೆ. (History of the Arab by Philip k. Hitti, 10th edition, page 175, London 1989)

ಹಝ್ರ್ರತ್ ಉಮರರ ಪ್ರಸ್ತಾಪ ಮುಂದುವರೆಯುವುದು.

ಈಗ ಕೆಲವು ದಿವಂಗತರ ಬಗ್ಗೆ ನಾನು ಪ್ರಸ್ತಾಪಿಸುವೆನು. ಮೊದಲ ಪ್ರಸ್ತಾಪ ಸನ್ಮಾನ್ಯ ಸಾಹಿಬ್‌ಝಾದಿ ಆಸಿಫ ಮಸ್‌ಊದ ಬೇಗಂ ಸಾಹಿಬ್‌ರದ್ದಾಗಿದೆ. ಅವರು ಹಝ್ರ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್‌ರ ಮಗನಾದ ಮಿರ್ಝಾ ಮುಬಶ್ಶಿರ್ ಅಹ್ಮದ್ ಸಾಹಿಬ್‌ರ ಪತ್ನಿಯಾಗಿದ್ದರು. ಅವರು 92ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಹಝ್ರ್ರತ್ ಮಸೀಹ್ ಮೌಊದ್‌ರ ಮೊಮ್ಮಗಳು ಮತ್ತು ಹಝ್ರ್ರತ್ ನವಾಬ್ ಮುಬಾರಕ ಬೇಗಂ ಸಾಹಿಬ ಹಾಗೂ ಹಝ್ರ್ರತ್ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹಿಬ್‌ರ ಅತ್ಯಂತ ಕಿರಿಯ ಪುತ್ರಿಯಾಗಿದ್ದರು. ಹಝ್ರ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್‌ರ ಸೊಸೆಯಾಗಿದ್ದರು. ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ಮಾಡಿದ್ದರು. ಅವರು ಒಬ್ಬ ಪುತ್ರನನ್ನು ಮತು ನಾಲ್ವರು ಪುತ್ರಿಯರನ್ನು ಅಗಲಿರುವರು. ಅವರ ಮಗನಾದ ತಾರಿಖ್ ಅಕ್ಬರ್ ಹೇಳುತ್ತಾರೆ: ತಾಯಿ ಸದಾ ಜಮಾಅತ್ ಮತ್ತು ಖಿಲಾಫತಿನಗೆ ನಿಷ್ಠಾವಂತರಾಗಿದ್ದರು. ಜಮಾಅತಿನ ಸೇವೆ ಮಾಡಲು ಮತ್ತು ತಾನು ಮಾಡಿದ ವಸಿಯ್ಯತಿನ ಹಕ್ಕನ್ನು ಈಡೇರಿಸಲು ಯಾವಾಗಲೂ ಪ್ರಯತ್ನಿಸುತ್ತಿದ್ದರು. ತಾಯಿ ತನ್ನ ಜೀವಿತದಲ್ಲೇ ತನ್ನ ಸೊತ್ತಿನ ವಸಿಯ್ಯತ್ತಿನ ಪಾಲನ್ನು ಪಾವತಿಸಿದ್ದರು. ಪ್ರತಿ ವರ್ಷ ದಿವಂಗತರ ಪರವಾಗಿಯೂ ಚಂದಾ ನೀಡುತ್ತಿದ್ದರು. ಬಡವರನ್ನು ತೆರೆದ ಮನಸ್ಸಿನೊಂದಿಗೆ ಮತ್ತು ರಹಸ್ಯವಾಗಿ ಸಹಾಯ ಮಾಡುತ್ತಿದ್ದರು. ಮನೆಯಲ್ಲಿದ್ದ ಸೇವಕರ ಬಗ್ಗೆ ಅವರು ನಿಮ್ಮ ಸಹೋದರ ಸಹೋದರಿಯರಂತೆ ಆಗಿದೆ. ಆದ್ದರಿಂದ ಅವರ ಆವಶ್ಯಕತೆಗಳ ಬಗ್ಗೆ ಗಮನಹರಿಸಬೇಕೆಂದು ಹೇಳುತ್ತಿದ್ದರು. ನಮಾಝನ್ನು ಪಾಲಿಸುವ ಮತ್ತು ಮನುಕುಲದ ಹಕ್ಕುಗಳನ್ನು ಈಡೇರಿಸುವವರಾಗಿದ್ದರು.

ಅವರ ಸೊಸೆಯಾದ ನಈಮ ಸಾಹಿಬ ಹೇಳುತ್ತಾರೆ: ಅಮೇರಿಕದಲ್ಲಿ ನಮ್ಮ ಮನೆ ನಿರ್ಮಾಣದ ಕೆಲಸ ಪೂರ್ಣವಾದಾಗ ಅವರು ಹೇಳಿದರು: ಆ ಮನೆಗೆ ಸಾಮಾನುಗಳನ್ನು ಕೊಂಡು ಹೋಗುವುದಕ್ಕೆ ಮುಂಚಿತವಾಗಿ ಪ್ರತಿ ಕೊಠಡಿ ಮತ್ತು ಪ್ರತಿಯೊಂದು ಮೂಲೆಯಲ್ಲಿ ಐಚ್ಛಿಕ ನಮಾಝನ್ನು ಅನುಷ್ಠಿಸಬೇಕು. ಸೊಸೆ ಹೇಳುತ್ತಾರೆ: ನನ್ನ ತಾಯಿ ಮೃತಪಟ್ಟಾಗ ಅವರು ಹೀಗೆ ಹೇಳಿದರು: ಈಗ ನೀನು ತಾಯಿಯಿಲ್ಲದವಳಾದೆ ಎಂದು ಭಾವಿಸಬೇಡ.

ನಾನು ನಿನ್ನ ತಾಯಿಯಾಗಿದ್ದೇನೆ. ನಿಜವಾಗಿಯೂ ಸ್ನೇಹಮಯಿ ಮತ್ತು ಪ್ರಾರ್ಥನೆ ಮಾಡುವ ಅವರು ನನ್ನನ್ನು ತನ್ನ ಸ್ವಂತ ಪುತ್ರಿಯರಿಗಿಂತ ಹೆಚ್ಚು ಪ್ರೀತಿಸಿದ್ದರು. ಖಿಲಾಫತಿನೊಂದಿಗಿನ ಸಂಬಂಧವನ್ನು ಎಂದಿಗೂ ಬಿಡಬೇಡ. ಇದು ಅವರ ಮಾತು ಮಾತ್ರವಾಗಿರಲಿಲ್ಲ. ಅವರು ಖಿಲಾಫತಿನೊಂದಿಗೆ ತನ್ನ ಸಂಬಂಧವನ್ನು ನಿಷ್ಠೆಯಿಂದ ನಿಭಾಯಿಸಿದರು. ಬಹಳವಾಗಿ ದಾನಧರ್ಮ ಮಾಡುವವರಾಗಿದ್ದರು. ತಹ್ರೀಕ್ ಜದೀದಿನ ಚಂದಾ ಹಿರಿಯರ, ಅಧ್ಯಾಪಕರ ಮಾತ್ರವಲ್ಲ ಖಾದಿಯಾನಿನ ಜಮಾಅತಿನ ಸೇವಕರ ಪರವಾಗಿಯೂ ಪಾವತಿಸುತ್ತಿದ್ದರು. ಮನೆಯಲ್ಲಿದ್ದ ಸೇವಕರಿಗೆ ಆವಶ್ಯ ಬರುವಾಗಲೆಲ್ಲ ರಜೆ ನೀಡುತ್ತಿದ್ದರು. ಅವರಿಂದ ತಪ್ಪಾದರೆ ಅವರನ್ನು ಕ್ಷಮಿಸಲು ಹೇಳುತ್ತಿದ್ದರು.

ಅವರ ಒಬ್ಬ ಮಗಳಾದ ಶಾಹಿದ ಹೇಳುತ್ತಾಳೆ: ಸಣ್ಣಂದಿನಿಂದಲೇ ನಮ್ಮ ತಾಯಿ ನಮಗೆ ಅಲ್ಲಾಹನನ್ನು ಪರಿಚಯ ಪಡಿಸಿ ತಂದಿದ್ದರು. ಶೂವಿನ ದಾರ ಬೇಕಿದ್ದರೂ ಅಲ್ಲಾಹನೊಡನೆ ಬೇಡು ಮತ್ತು ಪ್ರಾರ್ಥನೆಗಳನ್ನು ಹೆಚ್ಚಾಗಿ ಮಾಡು ಎಂದು ಹೇಳುತ್ತಿದ್ದರು. ಖಿಲಾಫತಿಗೆ ಗೌರವ ಕೊಡುವುದರ ಬಗ್ಗೆ ಉಪದೇಶಿಸುತ್ತಿದ್ದರು. ಖಿಲಾಫತಿನ ಚುನಾವಣೆಯ ಸಂದರ್ಭ ಬಂದಾಗ, ಯಾರೇ ಖಲೀಫರಾದರೂ ಪರಿಪೂರ್ಣ ವಿಧೇಯತೆಯೊಂದಿಗೆ ಅನುಸರಿಸಬೇಕು ಎಂದು ಹೇಳುತ್ತಿದ್ದರು. ಹಝ್ರತ್ ಮಸೀಹ್ ಮೌಊದ್‌ರ ಹಚ್ಚಹಸುರಾದ ಶಾಖೆಯಾಗಲು, ಒಣ ಕೊಂಬೆಯಾಗದಿರಲು ದುಆ ಮಾಡಬೇಕು ಎಂದು ಹೇಳುತ್ತಿದ್ದರು. ಯಾರೂ ಸತ್ಯಮಾರ್ಗದಿಂದ ಎಡವಿ ಹೋಗಲು ನೀವು ಕಾರಣಕರ್ತರಾಗಬಾರದು ಎಂದು ಹೇಳುತ್ತಿದ್ದರು.

ಅವರ ಇನ್ನೋರ್ವ ಮಗಳಾದ ನುಸ್ರತ್ ಜಹಾಂ ಹೇಳುತ್ತಾರೆ: ಸಣ್ಣಂದಿನಿಂದಲೇ ನಮ್ಮ ತರಬೇತಿಯ ಬಗ್ಗೆ ಕಾಳಜಿ ವಹಿಸುತ್ತಿದ್ದರು. ಪವಿತ್ರ ಖುರ್‌ಆನ್ ಓದುವಾಗ ಯಾವುದಾದರೂ ವಚನದಲ್ಲಿ ನಿಂತು ಅದರ ಅರ್ಥವನ್ನು ತಿಳಿಸಿಕೊಡುತ್ತಿದ್ದರು. ಆ ಸಂಬಂಧವಾಗಿ ಏನಾದರೂ ಉಪದೇಶ ನೀಡುತ್ತಿದ್ದರು. ಸದಾ ಹಿರಿಯರ ಸವಿನೆನಪು ಮಾಡುತ್ತಿದ್ದರು. ಅನೇಕ ಅಮೂಲ್ಯ ಮತ್ತು ಉತ್ತಮ ಪಾಠಗಳುಳ್ಳ ಕಥೆಗಳು ಅವರಿಗೆ ಗೊತ್ತಿತ್ತು. ಅದನ್ನು ಅವರು ನಮಗೆ ಹೇಳುತ್ತಿದ್ದರು.

ಹಝ್ರತ್ ಅಮತುಲ್ ಹಫೀಝ್ ಸಾಹಿಬ್‌ರ ಮಗಳೂ ಲಾಹೋರಿನ ಜಿಲ್ಲಾ ಸದರ್ ಲಜ್ನ ಆಗಿರುವ ಅಮತುಲ್ ಹಫೀಝ್ ಸಾಹಿಬ ಹೇಳುತ್ತಾರೆ: ಅಸಾಮಾನ್ಯವಾದ ಮಹಿಳೆಯಾಗಿದ್ದರು. ಯಾವಾಗಲೂ ಚಂದಾ ಕೊಡಲು ಹೇಳಿದರೆ, ತೆರೆದ ಮನಸ್ಸಿನಿಂದ ಚಂದಾ ನೀಡುತ್ತಿದ್ದರು. ಕೆಲವೊಮ್ಮೆ ನೇರವಾಗಿ ಅಥವಾ ಕಾಗದದಲ್ಲಿ ಬರೆದು ಚಂದಾದ ವಾಗ್ದಾನ ನೀಡುತ್ತಿದ್ದರು. ಚಂದಾವಾಗಿ ಹೆಚ್ಚು ಹಣವನ್ನು ನೀಡುತ್ತಿದ್ದರು. ಇದರ ಬಗ್ಗೆ ಎಲ್ಲೂ ಪ್ರಸ್ತಾಪಿಸಬೇಡ ಎಂದೂ ಹೇಳುತ್ತಿದ್ದರು. ಬಹಳ ಸರಳ ಮಹಿಳೆಯಾಗಿದ್ದರು. ತನ್ನ ವೈಯಕ್ತಿಕ ವಿಷಯದಲ್ಲಿ ಬಹಳ ಸರಳವಾಗಿದ್ದರು. ಇದರಿಂದ ಕೆಲವರು ಅವರನ್ನು ಜಿಪುಣರೆಂದು ಭಾವಿಸುತ್ತಿದ್ದರು. ಸತ್ಯದಲ್ಲಿ ಸ್ವತಃ ಸರಳವಾಗಿದ್ದುಕೊಂಡು ದಾನಧರ್ಮಗಳನ್ನು ಬಹಳವಾಗಿ ಮಾಡುತ್ತಿದ್ದರು. ಒಂದು ಸಲ ಮಸೀದಿಗಾಗಿ ಅವರೊಡನೆ ಚಂದಾ ಕೇಳಿದ್ದಾಗ, ಅವರು ನನಗೆ ಚಂದಾವಾಗಿ ಒಂದು ಕೋಟಿ ರೂಪಾಯಿ ಕೊಟ್ಟರು.

ಅವರ ಮೊಮ್ಮಗಳಾದ ರಾಝಿಯ ಸಾಹಿಬ ಹೇಳುತ್ತಾರೆ: ಅನೇಕ ಒಳ್ಳೆಯ ಮಾತುಗಳನ್ನು ಮತ್ತು ಉಪದೇಶಗಳನ್ನು ನಮಗೆ ಚಿಕ್ಕಂದಿನಿಂದಲೇ ಅವರು ಹೇಳುತ್ತಿದ್ದರು. ಸಣ್ಣಂದಿನಿಂದಲೇ ಉತ್ತಮ ವೈವಾಹಿಕ ಸಂಬಂಧಕ್ಕಾಗಿ ದುಆ ಮಾಡಲು ಹೇಳುತ್ತಿದ್ದರು. ಉತ್ತಮ ಗಂಡ ಸಿಗಲು ದುಆ ಮಾಡಲು ಹೇಳುತ್ತಿದ್ದರು. ಅಲ್ಲಾಹನ ಮುಂದೆ ನಾಚಿಕೆಪಡಬೇಕಾಗಿಲ್ಲ ಎಂದು ಹೇಳುತ್ತಿದ್ದರು. ಅವನೊಂದಿಗೆ ತೆರೆದ ಮನಸ್ಸಿನಿಂದ ಬೇಡು. ಧಾರ್ಮಿಕ ಪುಸ್ತಕಗಳನ್ನು ನಿಯತವಾಗಿ ಓದುತ್ತಿದ್ದರು. ಯಾತ್ರೆಗಳಲ್ಲಿ ಹೆಚ್ಚಾಗಿ ದುಆಗಳನ್ನು ಮಾಡುತ್ತಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಮಕ್ಕಳಿಗೂ ಅವರ ಹೆಜ್ಜೆಗುರುತುಗಳಲ್ಲಿ ನಡೆಯಲು ಸೌಭಾಗ್ಯ ನೀಡಲಿ.

ಎರಡನೇ ಜನಾಝ ಸನ್ಮಾನ್ಯ ಕ್ಲಾರ್ ಆಪಾ ಸಾಹಿಬರದ್ದಾಗಿದೆ. ಅವರು ಖಝಕಿಸ್ತಾನದ ಅಮೀರ್ ಜಮಾಅತಾದ ರೋಲಾನ್ ಸಾಇನ್ ಬಾಇಫ್ ಸಾಹಿಬ್‌ರ ಪತ್ನಿಯಾಗಿದ್ದರು. ಕ್ಲಾರ್ ಆಪಾ ಸಾಹಿಬ ಕಳೆದ ದಿನಗಳಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.** ಖಝಕಿಸ್ತಾನದ ಮುಬಲ್ಲಿಗ್‌ರಾದ ಅತಾಉರ್ರಬ್ ಚೀಮ ಸಾಹಿಬ್ ಬರೆಯುತ್ತಾರೆ: 1994 –95ರಲ್ಲಿ ಕ್ಲಾರ್ ಸಾಹಿಬರಿಗೆ ಬೈಅತ್ ಮಾಡುವ ಸೌಭಾಗ್ಯ ಲಭಿಸಿತ್ತು. ಅವರು ಖಝಕಿಸ್ತಾನದ ಪ್ರಸಿದ್ಧ ಮನೆತನದವರಾಗಿದ್ದರು. ಕಳೆದ ದಿನದಲ್ಲಿ ನಿಧನರಾದರು. ಇನ್ನಾ ಲಿಲ್ಲಾಹಿ ವ ಇನಾ ಇಲೈಹಿ ರಾಜಿಊನ್. ಅವರ ಪತಿಯಾದ ಸನ್ಮಾನ್ಯ ರೋಲಾನ್ ಸಾಇನ್ ಬಾಇಫ್ ಸಾಹಿಬ್ ಖಝಾಕಿಸ್ತಾನಿನ ಮೊದಲ ಅಮೀರ್ ಜಮಾಅತ್ ಮತ್ತು ರಿಪಬ್ಲಿಕಿನ ಎಡ್‌ವೈಝರ್ ಸಹ ಆಗಿದ್ದರು. ಖಝಾಕ್ ಭಾಷೆಯ ಪ್ರಸಿದ್ಧ ಸಾಹಿತ್ಯಗಾರ ಸಹ ಆಗಿರುವರು. ಕ್ಲಾರ್ ಸಾಹಿಬ ಸಹ ಬಹಳ ಉತ್ತಮ ಅನುವಾದಕಿ ಮತ್ತು ಲೇಖಕಿಯಾಗಿದ್ದರು. ಖಜಾಕಿಸ್ತಾನ್ ಜಮಾಅತಿನ ಸ್ಥಾಪನೆಯನ್ನು ಅವರು ಮಾಡಿದ್ದರು. ಸನ್ಮಾನ್ಯ ಕ್ಲಾರ್ ಸಾಹಿಬ ಪವಿತ್ರ ಖುರ್‌ಆನಿನ ತರ್ಜುಮೆ ಖಜಾಖ್ ಭಾಷೆಯಲ್ಲಿ ಮಾಡಿದ್ದರು. ಅದು ಈಗ ಪ್ರಕಾಶನಗೊಂಡಿಲ್ಲ. ಆದರೆ ಇದರಿಂದ ಅವರಿಗೆ ಜಮಾಅತಿನೊಂದಿಗೆ ಇದ್ದ ಪ್ರೀತಿ ಬಯಲಾಗುತ್ತದೆ. ಅವರು ಖಜಾಕಿಸ್ತಾನದಲ್ಲಿ ಅಹ್ಮದಿಯಾ ಜಮಾಅತ್ ಪುಷ್ಟಿಸುವುದನ್ನು ಬಯಸುತ್ತಿದ್ದರು. ಅದಕ್ಕಾಗಿ ಅವರು ಬಹಳ ಪ್ರಯತ್ನಿಸುತ್ತಿದ್ದರು. ಇವರೇ ಖಜಾಕಿಸ್ತಾನದಲ್ಲಿ ಅಹ್ಮದಿಯಾ ಜಮಾಅತನ್ನು ತಂದಿರುವವರು ಎಂದು ಪ್ರಾದೇಶಿಕ ಮುಲ್ಲಾಗಳು ಅವರನ್ನು ವಿರೋಧಿಸುತ್ತಾ ಹೇಳುತ್ತಾರೆ. ಸನ್ಮಾನ್ಯ ಕ್ಲಾರ್ ಸಾಹಿಬದ ಮಗಳಾದ ಮುರಬ್ಬ ಸಾಸೀನ ಬರೆಯುತ್ತಾರೆ; ಅವರು ಬಹಳ ಉತ್ತಮ ಅನುವಾದಕಿಯಾಗಿದ್ದರು. ಪರಿಶ್ರಮಿ ಮತ್ತು ಸುದೃಢ ವ್ಯಕ್ತಿತ್ವದವರಾಗಿದ್ದರು. ಅವರು ಶುದ್ಧ ಮತ್ತು ಹೊಳಪಿನ ಗುಣಗಳನ್ನು ಹೊಂದಿದ್ದವರಾಗಿದ್ದರು. ಲಂಡನಿನಲ್ಲೇ ಅವರು ಖಝಾಕಿಸ್ತಾನ್ ಎಂಬ ಪುಸ್ತಕವನ್ನು ಬರೆದಿದ್ದರು. ಆಗಲೇ ಅವರಿಗೆ ಅಹ್ಮದಿಯ್ಯತ್ತಿನ ಪರಿಚಯವಾಯಿತು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರ ಸನ್ನಿಧಿಯಲ್ಲಿ ಬೈಅತ್ ಮಾಡುವ ಸೌಭಾಗ್ಯ ಪಡೆದಿದ್ದರು. ಅವರು ಸ್ವಂತ ಮಕ್ಕಳ ಮಾತ್ರ ತಾಯಿಯಾಗಿರಲಿಲ್ಲ. ಬದಲಾಗಿ ಅವರ ಬಳಿ ಸಹಾಯ ಮತ್ತು ಸಲಹೆಗಾಗಿ ಬರುವವರಿಗೂ ತಾಯಿಯಂತೆ ಆಗಿದ್ದರು.

ನೂರಂ ತಾಯಿಬೇಕ್ ಸಾಹಿಬ್ ಹೇಳುತ್ತಾರೆ: ಜಮಾಅತಿನ ಎಲ್ಲ ಯುವ ಅಹ್ಮದಿಯರಿಗೂ ಮತ್ತು ಖಜಾಕಿಸ್ತಾನ್ ಜಮಾಅತಿಗೂ ಅವರು ತಾಯಿಯಂತೆ ಆಗಿದ್ದರು. ಅವರು ಹೇಳುತ್ತಾರೆ: ನಾನು ಹತ್ತು ವರ್ಷಗಳಲ್ಲಿ ಕ್ಲಾರ್ ಸಾಹಿಬರ ಆ ಕಾಲಘಟ್ಟವನ್ನು ಕಂಡೆನು. ಅದರ ಮೊದಲ ಮೂರು ವರ್ಷಗಳಲ್ಲಿ ಅತ್ಯಂತ ಆವೇಶದಿಂದ ಕೆಲವೊಮ್ಮೆ ಒಂದು ಪರ್ವತದ ಹಾಗೆ ಜಮಾಅತಿನ ಸಂರಕ್ಷಣೆ ಮತ್ತು ಜಮಾಅತಿನ ಸೇವೆಯಲ್ಲಿ ನರತರಾಗಿದ್ದರು. ಅವರು ಜಮಾಅತಿನ ಪುಸ್ತಕಗಳ ತಯಾರಿ ಮತ್ತು ಇತರ ಕೆಲಸಗಳಲ್ಲಿ ನಿರತರಾಗುತ್ತಿದ್ದರು. ನಂತರ ರೋಗಿಯಾದರು. ಆದರೆ ಜಮಾಅತಿನ ಹೆಚ್ಚು ಹೆಚ್ಚು ಕೆಲಸಗಳನ್ನು ಮಾಡಲು ಸದಾ ಮನಸ್ಸಾರೆ ಪ್ರಯತ್ನಿಸುತ್ತಿದ್ದರು. ಜಮಾಅತ್ ಮತ್ತು ಖಿಲಾಫತಿಗೆ ಸದಾ ನಿಷ್ಠಾವಂತರಾಗಿದ್ದರು.

ರೋಲಾನ್ ಸಾಹಿಬ್ ಮತ್ತು ಕ್ಲಾರ್ ಸಾಹಿಬ ಕಝಾಕಿಸ್ತಾನದಲ್ಲಿ ಒಂದು ದೀರ್ಘಕಾಲದಿಂದ ದೇಶಪ್ರೇಮ ಮತ್ತು ದೇಶದ ಉನ್ನತ ಪ್ರಗತಿಯ ಗುರುತಾಗಿ ಅರಿಯಲ್ಪಡುತ್ತಿದ್ದರು. ರೋಲಾನ್ ಸಾಹಿಬ್‌ರ ವಿಜಯಗಳ ಹಿರಿಯ ಪಾಲು ಕ್ಲಾರ್ ಸಾಹಿಬ್‌ರ ಕಾರಣದಿಂದಾಗಿದೆ. ಅವರು ಖಜಾಕಿಸ್ತಾನ ಜಮಾಅತಿನ ಒಬ್ಬ ಕ್ರಿಯಾಶೀಲ ಸದರ್ ಮಾತ್ರವಾಗಿರಲಿಲ್ಲ. ಬದಲಾಗಿ ಕಜಾಕಿಸ್ತಾನ ಜಮಾಅತಿನ ಮೊದಲ ಅಮೀರಿನ ಉಸ್ತಾದ್ ಆಗಿದ್ದರು ಅವರು 1996ರಿಂದ 1999ರ ತನಕ ಮತ್ತು ನಂತರವೂ ಅವರು ಎಷ್ಟು ಉತ್ತಮ ರೀತಿಯಲ್ಲಿ ಜಮಾಅತಿನ ಮಿಶನ್ ಹೌಸಿನಲ್ಲಿ ವಾರಾಂತ್ಯದ ಕ್ಲಾಸಿನ ಹಾಜರಿಯನ್ನು ಖಾತರಿಗೊಳಿಸುತ್ತಿದ್ದರು ಎಂದು ನನಗೆ ನೆನಪಿದೆ. ಅದರಲ್ಲಿ ಲಜ್ನ ಸ್ತ್ರೀಗಳು ಮುರಬ್ಬಿ ಸಾಹಿಬ್‌ರೊಡನೆ ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದರು ಮತ್ತು ಉತ್ತರಗಳನ್ನು ಪಡೆಯುತ್ತಿದ್ದರು. ಕಝಾಕ್ ಭಾಷೆಯಲ್ಲಿ ಜಮಾಅತಿನ ಸಾಹಿತ್ಯಗಳಿಗೆ ಕ್ಲಾರ್ ಸಾಹಿಬರಿಗಿಂತ ಉತ್ತಮ ಅನುವಾದಕಿ ಇಲ್ಲ. ಕ್ಲಾರ್ ಸಾಹಿಬ್ ಕಜಾಕ್ ಜಮಾಅತಿನ ಎಲ್ಲ ಹಿರಿಯರಿಗಿಂತ ಉತ್ತಮ ಅಹ್ಮದಿಯಾಗಿದ್ದರು. ಅವರು ಜಮಾಅತಿನ ಯುವ ಅಹ್ಮದಿಯರ ಆಧ್ಯಾತ್ಮಿಕ ಉನ್ನತಿಗೆ ಕಾರಣಕರ್ತರಾಗಿದ್ದರು. ಅವರಲ್ಲಿ ಜಮಾಅತಿನ, ಎಂದರೆ ಇಸ್ಲಾಮಿನ ನೈಜ ಚೈತನ್ಯವಿತ್ತು. ಪ್ರಯಾಸದ ಅವಸ್ಥೆಯಲ್ಲೂ ಅವರು ಧೈರ್ಯಗುಂದುತ್ತಿರಲಿಲ್ಲ. ಬದಲಾಗಿ ಸದಾ ಸ್ವತಃ ಮತ್ತು ಇತರರನ್ನು ವಿಜಯಗಳ ಕಡೆಗೆ ಕೊಂಡುಹೋಗುತ್ತಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಕಜಾಕಿಸ್ತಾನ ಜಮಾಅತಿಗಾಗಿ ಅವರು ಮಾಡಿದ ಪ್ರಯತ್ನಗಳನ್ನು ಅಲ್ಲಾಹನು ಈಡೇರಿಸಲಿ. ಅವರ ಪ್ರಾರ್ಥನೆಗಳನ್ನು ಸಹ ಸ್ವೀಕರಿಸಲಿ.

ಮುಂದಿನ ಜನಾಝ ವಿಂಗ್ ಕಮಾಂಡರ್ ಅಬ್ದುರ್ರಶೀದ್ ಸಾಹಿಬ್‌ರದ್ದಾಗಿದೆ. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.** ಅಲ್ಲಾಹನ ಅನುಗ್ರಹದಿಂದ ಅವರು ವಸಿಯ್ಯತ್ ಮಾಡಿದ್ದರು. ಅವರ ಮಗನಾದ ಫಾರೂಖ್ ಸಾಹಿಬ್ ಹೇಳುತ್ತಾರೆ: ಅವರ ತಂದೆಯ ಹೆಸರು ಬಾಬು ಶೇಖ್ ಅಬ್ದುಲ್ ಅಝೀಝ್ ಸಾಹಿಬ್ ಎಂದಾಗಿತ್ತು. ಅವರು ಸೆಕ್ರಟರಿ ಮಜ್ಲಿಸ್ ಕಾರ್‌ಪರ್‌ದಾಝ್ ಆಗಿದ್ದರು. ಅವರ ದೊಡ್ಡಪ್ಪ ಫಝ್ಲಾಂದ್ ಅಲಿ ಖಾನ್ ಸಾಹಿಬ್ ಆಗಿದ್ದರು. ಅವರನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಲಾಹೋರ್ ಜಮಾಅತಿನ ಮೊದಲ ಅಮೀರ್

ಆಗಿ ನಿಶ್ಚಯಿಸಿದ್ದರು. ಅವರ ತಂದೆ ತನ್ನ ಯೌವ್ವನದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್‌ರ ಕೈಯಲ್ಲಿ ಬೈಅತ್ ಮಾಡಿದ್ದರು. ಮಗನು ತನ್ನ ತಂದೆಯಾದ ರಶೀದ್ ಸಾಹಿಬ್‌ರ ಬಗ್ಗೆ ಹೇಳುತ್ತಾರೆ: ಅವರು ತನ್ನ ತಂದೆತಾಯಂದಿರ ಏಕ ಮಗನಾಗಿದ್ದರು. ಮೊದಲು ತಾತರ ವಿವಾಹವಾಗಿತ್ತು. ಅನಂತರ ಅಹ್ಮದಿಯ್ಯತ್ ಸ್ವೀಕಾರದ ಕಾರಣದಿಂದ ಪತ್ನಿಯನ್ನು ಮತ್ತು ಇಬ್ಬರು ಪುತ್ರಿಯರನ್ನು ಉಪೇಕ್ಷಿಸಬೇಕಾಯಿತು. ಅನಂತರ ಅವರು ಪುನಃ ವಿವಾಹವಾದರು. ಅವರಿಂದ ರಶೀದ್ ಸಾಹಿಬ್ ಹುಟ್ಟಿದರು. ಅವರು ತಂದೆತಾಯಂದಿರಿಗೆ ಸದಾ ವಿಧೇಯರಾಗಿದ್ದರು ಮತ್ತು ಅವರ ಸೇವೆ ಮಾಡುತ್ತಿದ್ದರು. ಪಾರ್ಟಿಶನ್ ತನಕ ಅವರು ಖಾದಿಯಾನಿನಲ್ಲೇ ಶಿಕ್ಷಣ ಪಡೆದಿದ್ದರು. ಪಾರ್ಟಿಶನ್ ಸಮಯದಲ್ಲಿ ಅವರು ಇತರ ಸಂಘದೊಂದಿಗೆ ಖಾದಿಯಾನಿನಿಂದ ಲಾಹೋರಿಗೆ ಹೋದರು. ಆರಂಭದ ಕೆಲವು ಕುಟುಂಬದೊಂದಿಗೆ ತನ್ನ ತಂದೆತಾಯಂದಿರ ಜೊತೆಗೆ ರಬ್ವದಲ್ಲಿ ನೆಲೆಸಿದರು. 1954ರಲ್ಲಿ ಅವರು ಏರ್‌ಫೋರ್ಸ್‌ನಲ್ಲಿ ಪ್ರೊಮೋಶನ್ ಪಡೆದರು. ಅನೇಕ ಏರ್ ಬೇಸಸ್‌ಗಳಲ್ಲಿ ನಿಶ್ಚಿತಗೊಂಡಿದ್ದರು. ಎಲ್ಲಿದ್ದರೂ ಅಹ್ಮದಿಯಾಗಿರುವುದನ್ನು ಹೇಳಿಕೊಳ್ಳುತ್ತಿದ್ದರು. ಪಾಕಿಸ್ತಾನ ಸರ್ಕಾರದ ವತಿಯಿಂದ ಅವರನ್ನು ಲೇಬಿಯಗೂ ಕಳುಹಿಸಲಾಗಿತ್ತು. ಅವರ ಫೈಲಿನಲ್ಲಿ ಅವರ ಬಗ್ಗೆ ಖಾದಿಯಾನಿಯಾಗಿದೆ ಎಂದು ಬರೆಯಲಾಗಿತ್ತು. ಆದರೂ ಅವರ ಆಫೀಸರ್ ಅವರನ್ನು ಕಳುಹಿಸಿದರು. ನಿಮ್ಮಂತಹ ಆಫೀಸರ್ ನನಗೆ ಬೇರೆ ಕಾಣುತ್ತಿಲ್ಲವೆಂದು ಹೇಳಿ ಅವರನ್ನು ಕಳುಹಿಸಿದರು. ಒಂದು ಸಲ ಲೇಬಿಯದಲ್ಲಿ ಪಾಕಿಸ್ತಾನದ ರಾಯಭಾರಿಯನ್ನು ತಂದೆಯವರು ಭೇಟಿಯಾಗಿದ್ದರು. ರಾಯಭಾರಿಯ ಆಫೀಸಿನಲ್ಲಿ ಒಂದು ಕಡೆ ಜಮಾಅತಿನ ವಿರುದ್ಧ ಬರೆಯಲಾದ ಅರಬಿ ಪುಸ್ತಕಗಳನ್ನು ಮತ್ತು ಲೀಫ್‌ಲೆಟ್‌ಗಳನ್ನು ಇದ್ದುವು. ಆಗ ರಶೀದ್ ಸಾಹಿಬ್‌ರು ಬಹಳ ಧೈರ್ಯದಿಂದ ಇದೇನೆಂದೂ ಇದನ್ನು ಏಕೆ ಇರಿಸಿದ್ದೀರಿ ಎಂದೂ ಕೇಳಿದ್ದರು. ಅವರು ಹೇಳಿದರು: ಎಲ್ಲವು ಆನಾವಶ್ಯಕ ಪುಸ್ತಕಗಳು. ಝಿಯಾಉಲ್ ಹಕ್ಕಿನ ಸರ್ಕಾರದ ಕಡೆಯಿಂದ ಪ್ರಕಾಶನಗೊಂಡು ನಮಗೆ ಕಳುಹಿಸಿಲಾಗಿದೆ. ಎಲ್ಲ ಅರೇಬಿಯ ಎಂಬಸಿಗಳಿಗೆ ಕಳುಹಿಸಲಾಗಿದೆ. ಅನಂತರ 1982ರಲ್ಲಿ ಅವರ ಒಂದು ರಿಪೋರ್ಟಿನ ಪ್ರಕಾರ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ಸ್ಪೇನಿಗೆ ಬಂದಿದ್ದರು. ಆಗ ಅವರು ಸ್ವತಃ ತನ್ನ ಕೈಯಿಂದ ಪತ್ರ ಬರೆದು ರಶೀದ್ ಸಾಹಿಬ್‌ರನ್ನು ಲೇಬಿಯದ ಅಮೀರ್ ಜಮಾಅತಾಗಿ ನಿಶ್ಚಯಿಸಿದ್ದರು. ಅವರು ಲೇಬಿಯದ ಮೊದಲ ಅಮೀರ್ ಜಮಾಅತ್ ಆಗಿದ್ದರು. ಐದು ಹೊತ್ತಿನ ನಮಾಝಿನೊಂದಿಗೆ ಪವಿತ್ರ ಖುರ್‌ಆನ್ ಪಾರಾಯಣ ಮತ್ತು ಚಂದಾಗಳ ಪಾವತಿಯಲ್ಲಿ ಕರಾರುವಕ್ಕಾಗಿದ್ದರು. ತನ್ನ ಮರಣಕ್ಕೆ ಮುಂಚಿತವಾಗಿ ಸೊತ್ತಿನ ವಸಿಯ್ಯತಿನ ಪಾಲನ್ನು ಪಾವತಿಸಿದ್ದರು. ವಖ್ಫೇ ಜದೀದ್ ಮತ್ತು ತಹ್ರೀಕ್ ಜದೀದಿನ ಚಂದಾಗಳನ್ನು ತನ್ನ ವತಿಯಿಂದಲೂ ತನ್ನ ಹಿರಿಯರ ಪರವಾಗಿಯೂ ಪಾವತಿ ಮಾಡುತ್ತಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಸಾನಿಯರ ಒಂದು ಘಟನೆಯನ್ನು ಅವರು ಹೇಳುತ್ತಿದ್ದರು. ರಬ್ವದ ಆರಂಭ ಕಾಲದಲ್ಲಿ ಯಾವುದೋ ಸಂದರ್ಭದಲ್ಲಿ ಖಲೀಫತುಲ್ ಮಸೀಹ್ ಸಾನಿ ಅವರನ್ನು ಕರೆದರು. ಸೆಖೆಗಾಲವಾಗಿತ್ತು. ತಂದೆ ಕೊಠಡಿಗೆ ಪ್ರವೇಶಿಸಿದ ಸಮಯದಲ್ಲಿ ಹುಝೂರ್ ಒಂದು ಚಾಪೆಯಲ್ಲಿ ಮಲಗಿದ್ದರು. ಅವರು ಎದ್ದಾಗ ಅವರ ಶರೀರದಲ್ಲಿ ಚಾಪೆಯ ಗುರುತಿತ್ತು. ಈ ಸಂಗತಿಗಳ ಕಾರಣದಿಂದ ನಮ್ಮ ಹೃದಯದಲ್ಲೂ ಖಿಲಾಫತಿನೊಂದಿಗೆ ಪ್ರೀತಿ ಮತ್ತು ಅನುಸರಣೆಯ ಸಂಬಂಧ ಉಂಟಾಗಿತ್ತು ಮತ್ತು ಅದರ ಬಹಳ ಪ್ರಭಾವ ಉಂಟಾಗಿತ್ತು.

1984ರಲ್ಲಿ ಅವರು ಏರ್‌ಫೋರ್ಸಿನಿಂದ ರಿಟೈರ್ಡ್ ಆದರು. ಅನಂತರ ರಬ್ವದಲ್ಲಿ ಸ್ಥಿರವಾಸವಾದರು. ಸದರ್ ಉಮೂಮಿ ಮತ್ತು ಖಝಾದ ಆಫಿಸಿನಲ್ಲಿ ಕೆಲವು ಕಾಲ ಸೇವೆ ಸಲ್ಲಿಸಿದರು. ಬಡವರ ಪರಿಪಾಲನೆ ಮಾಡುವ ವ್ಯಕ್ತಿಯಾಗಿದ್ದರು. ಪ್ರತಿಯೊಬ್ಬರ ಆವಶ್ಯಕತೆಗಳ ಬಗ್ಗೆ ಕಾಳಜಿ ವಹಿಸುತ್ತಿದ್ದರು. ಬಡವರ ಬಗ್ಗೆ ಗಮನವಹಿಸಬೇಕೆಂದು ಅವರು ಕೊನೆಯದಾಗಿ ವಸಿಯ್ಯತ್ ಮಾಡಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಅವರ ಮಕ್ಕಳಿಗೂ ಸೌಭಾಗ್ಯ ನೀಡಲಿ.

ಮುಂದಿನ ಜನಾಝ ಅಮೇರಿಕದ ಕರೀಂ ಅಹ್ಮದ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಝುಬೈದ ಬೇಗಮ್‌ರದ್ದಾಗಿದೆ. ಕಳೆದ ತಿಂಗಳು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಹಝ್ರತ್ ಡಾಕ್ಟರ್ ಹಶ್ಮತುಲ್ಲಾಹ್ ಖಾನ್ ಸಾಹಿಬ್‌ರ ಕಿರಿಯ ಸೊಸೆಯಾಗಿದ್ದರು. ದಿವಂಗತರು ಖಿಲಾಫತಿನ ಪ್ರೇಮಿ ಮತ್ತು ನಿಷ್ಠಾವಂತ ಮಹಿಳೆಯಾಗಿದ್ದರು. ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ಮಾಡಿದ್ದರು. ದಿವಂಗತರು ಮೂವರು ಪುತ್ರರನ್ನು ಮತ್ತು ಇಬ್ಬರು ಪುತ್ರಿಯರನ್ನು ಅಗಲಿರುವರು. ಅವರ ಒಬ್ಬ ಮಗನಾದ ಮುನ್‌ಇಮ್ ನಈಂ ಸಾಹಿಬ್‌ರು ಅಮೇರಿಕದ ಹ್ಯೂಮಾನಿಟಿ ಫಸ್ಟಿನ ಚೇರ್‌ಮೇನ್ ಆಗಿರುವರು. ಡಾಕ್ಟರ್ ಅಬ್ದುಲ್ ಮನ್ನಾನ್ ಸಿದ್ದೀಖಿ ಸಾಹಿಬ್‌ರ ಅತ್ತೆಯಾಗಿದ್ದರು. ಅವರ ಮಗಳಾದ ಅಮತುಶ್ಶಾಫಿ ಸಾಹಿಬ ಬರೆಯುತ್ತಾರೆ: ಎಲ್ಲರೊಂದಿಗೆ ಪ್ರೀತಿ ಮತ್ತು ವಾತ್ಸಲ್ಯದಿಂದ ಇರುವುದು ಅವರ ಗುಣವಾಗಿತ್ತು. ಅವರಿಗಾಗಿ ದುಆ ಮಾಡುತ್ತಿದ್ದರು. ಉತ್ತಮ ಸಲಹೆಗಳನ್ನು ನೀಡುತ್ತಿದ್ದರು. ಬಡವರ ಸಹಾಯ ಮಾಡುತ್ತಿದ್ದರು. ನಿಕಟ ಮತ್ತು ದೂರದ ಸಂಬಂಧಿಕರೊಂದಿಗೆ ಪ್ರೀತಿಯಿಂದ ವರ್ತಿಸುವುದು ಅವರ ವಿಶೇಷ ಗುಣವಾಗಿತ್ತು. ಯೌವ್ವನದಿಂದಲೇ ತಹಜ್ಜುದ್ ನಿರ್ವಹಿಸುತ್ತಿದ್ದರು. ಅಲ್ಲಾಹನ ಮೇಲೆ ಭರವಸೆ ಇರಿಸುತ್ತಾ ತನ್ನ ಜೀವಿತವನ್ನು ಸಾಗಿಸಿದರು. ಜುಮಾದ ದಿವಸ ವಿಶೇಷವಾಗಿ ಆರಾಧನೆಯಲ್ಲಿ ನಿರತರಾಗಿರುವುದನ್ನು ನಾವು ಚಿಕ್ಕಂದಿನಿಂದಲೇ ಕಂಡಿದ್ದೇವೆ. ತನ್ನ ಚಂದಾವನ್ನು ಸಮಯಕ್ಕೆ ಸರಿಯಾಗಿ ಪಾವತಿಸುವ ಚಿಂತೆ ಅವರಿಗೆ ಇರುತ್ತಿತ್ತು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

ಮುಂದಿನ ಜನಾಝ ಹಫೀಝ್ ಅಹ್ಮದ್ ಘುಮನ್ ಸಾಹಿಬ್‌ರದ್ದಾಗಿದೆ. ಕಳೆದ ದಿನಗಳಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರಿಗೆ ಪವಿತ್ರ ಖುರ್‌ಆನಿನ ತರ್ಜುಮೆ ಮತ್ತು ವ್ಯಾಖ್ಯಾನ ಓದುವುದರಲ್ಲಿ ವಿಶೇಷ ಆಸಕ್ತಿ ಇತ್ತು. ಅವರು ಹಝ್ರತ್ ಮಸೀಹ್ ಮೌಊದ್‌ರ ಎಲ್ಲ ಗ್ರಂಥಗಳನ್ನು ಓದಿದ್ದರು. ರಬ್ವದಲ್ಲಿ ಅವರಿಗೆ ಧಾರ್ಮಿಕ ಸೇವೆಯ ಸಂದರ್ಭವು ಸಿಕ್ಕಿತ್ತು. ಬಹಳ ಸಮಯನಿಷ್ಠೆಯನ್ನು ಹೊಂದಿದ್ದರು. ಅತಿಥಿ ಸತ್ಕಾರ ಮಾಡುವವರು, ಮಕ್ಕಳೊಂದಿಗೆ ವಾತ್ಸಲ್ಯದಿಂದ ಇರುವವರು, ಸರಳಸ್ವಭಾವಿ ಮತ್ತು ಪರಿಶ್ರಮಿ ವ್ಯಕ್ತಿಯಾಗಿದ್ದರು. ಯಾವಾಗಲೂ ದೇವಸ್ಮರಣೆ ಮಾಡುತ್ತಿದ್ದರು. ಮನುಕುಲದೊಂದಿಗೆ ಸಹಾನುಭೂತಿಯಲ್ಲಿ ಬಹಳ ಮುಂದಿದ್ದರು. ಸ್ವತಃ ಕಷ್ಟದಲ್ಲಿ ಇದ್ದುಕೊಂಡು ಇತರರಿಗೆ ಸಮಾಧಾನ ತಲುಪಿಸುತ್ತಿದ್ದರು. ದಿವಂಗತರು ಅಲ್ಲಾಹನ ಅನುಗ್ರಹದಿಂದ ಮೂಸಿಯಾಗಿದ್ದರು. ದಿವಂಗತರು ಪತ್ನಿಯನ್ನಲ್ಲದೆ ಮೂವರು ಪುತ್ರರನ್ನು ಮತ್ತು ಇಬ್ಬರು ಪುತ್ರಿಯರನ್ನು ಅಗಲಿರುವರು. ಅವರ ಒಬ್ಬ ಅಳಿಯನಾದ ಕಾಶಿಫ್ ಹಮೀದ್ ಬಾಜ್ವ ನಮ್ಮ ಪಿ.ಎಸ್. ಆಫಿಸಲ್ಲಿ ಮುರಬ್ಬಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಮಗಳಾದ ಅಮತುಲ್ ಖುದ್ದೂಸ್ ಹೇಳುತ್ತಾರೆ: ವಿನಯವಂತಿಕೆ ಅವರಲ್ಲಿ ಬಹಳವಿತ್ತು. ಅವರ ವಸ್ತ್ರ ಸರಳ, ಅವರ ಮನೆ ಸರಳ, ಅವರ ಆಹಾರ ಸರಳವಾಗಿದ್ದುವು. ಡಂಬಾಚಾರದಿಂದ ದೂರವಿರುತ್ತಿದ್ದರು. ಅವರಿಗೆ ಸದಾ ಬಡವರ ಸಹಾಯ ಮಾಡುವುದರ ಬಗ್ಗೆ ಚಿಂತೆ ಇರುತ್ತಿತ್ತು. ಸಾಂಪತ್ತಿಕವಾಗಿ ಉತ್ತಮರಾಗಿದ್ದರೂ ತಮ್ಮ ಮೇಲೆ ಕಡಿಮೆ ಖರ್ಚು ಮಾಡುತ್ತಿದ್ದರು ಮತ್ತು ಬಡವರಿಗಾಗಿ ಹೆಚ್ಚು ಖರ್ಚು ಮಾಡುತ್ತಿದ್ದರು. ಅಲ್ಲಾಹನು ಅವರೊಡನೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲಿ ಸೌಭಾಗ್ಯ ನೀಡಲಿ.

***********

*(ಪುಟ ಸಂಖ್ಯೆ 01ರ ಉಳಿದ ಭಾಗ)*

**ಮಿಸ್ಬಾಹಕ ವಲೌ ಬಿಊದಿನ್ ತಅ್‌ರಿಝ್‌ಹು ವಖ್‌ಕುರ್ ಇಸ್‌ಮಲ್ಲಾಹಿ ವಔಕಿ ಸಿಖಾಅಕ ವಝ್‌ಕುರ್ ಇಸ್ಮಲ್ಲಾಹಿ ಅಝ್ಝವಜಲ್ಲ** (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–3, ಪುಟ–319) ಅನುವಾದ: ಅಂದರೆ ತಮ್ಮ ಬಾಗಿಲು ಹಾಕುವಾಗಲೂ ಬಿಸ್ಮಿಲ್ಲಾಹ್ ಹೇಳಿರಿ. ಮತ್ತು ದೀಪ ಆರಿಸುವಾಗಲೂ ಸಹ ಮತ್ತು ಪಾತ್ರೆ ಮುಚ್ಚಿಡುವಾಗಲೂ ಸಹ ಹಾಗೂ ಪರಿಮಳ ದ್ರವ್ಯದ ಬಾಟಲಿಗೆ ಮುಚ್ಚಳ ಹಾಕುವಾಗಲೂ ಸಹ, ಅದೇ ರೀತಿ ತನ್ನ ಮಡದಿಯ ಬಳಿ ಹೋಗುವಾಗಲೂ ಸಹ, ವುಝು ಮಾಡುವಾಗ, ಊಟ ಮಾಡುವಾಗ, ಬಹಿರ್ದಸೆಗೆ ಹೊಗುವ ಮೊದಲು, ವಸ್ತ್ರ ಧರಿಸುವಾಗ ಬಿಸ್ಮಿಲ್ಲಾಹ್ ಹೇಳುವುದು ಹದೀಸಿನಿಂದ ಸಾಬೀತಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಹಜ್‌ರತ್ ಸುಲೈಮಾನರು ಸಹ ತನ್ನ ಪತ್ರ ಬಿಸ್ಮಿಲ್ಲಾಹ್‌ನಿಂದ ಪ್ರಾರಂಭಿಸಿದ್ದರು. ಅಂದಹಾಗೆ ಇನ್ನು ಮಿನ್ ಸುಲೈಮಾನ್ ಏ ಇನ್ನಹು ಬಿಸ್ಮಿಲ್ಲಾಹಿರ್ರ ಹ್‌ಮಾನಿರ್ರಹೀಮ (ವನಮಲ್–2) ಅಂದರೆ ಈ ಪತ್ರವು ಸುಲೈಮಾನರಿಂದ ಬರೆಯಲ್ಪಟ್ಟಿದೆ. ಮತ್ತು ಬಿಸ್ಮಿಲ್ಲಾಹಿ ರ್ರಹಮಾನಿ ರ್ರಹೀಮ್‌ನಿಂದ ಪ್ರಾರಂಭಗೊಳ್ಳುತ್ತದೆ. ಹಝ್‌ರತ್ ನೂಹ್(ಅ) ರವರ ವಿವರ ನೀಡುತ್ತ ಪವಿತ್ರ ಖುರ್‌ಆನಿನಲ್ಲಿ ಬಂದಿರುತ್ತದೆ. ಅವರು ಹಡಗಿನಲ್ಲಿ ಸವಾರರಾಗುವ ವೇಳೆ ತನ್ನ ಸಂಗಡಿಗರಿಗೆ ಹೇಳಿದರು. **ಅರ್‌ಕಬು ಫೀಹಾ ಬಿಸ್ಮಿಲ್ಲಾಹಿ ಮಜ್ರ ಹಾ ವ ಮುರ್‌ಸಾಹಾ** (ಹೂದ್–42).

**(ತಫ್ಸೀರ್ ಕಬೀರ್, ಸಂಪುಟ–1, ಪುಟ–14)**

**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

**Love for All, Hatred for None**

*(ಪುಟ ಸಂಖ್ಯೆ 02ರ ಉಳಿದ ಭಾಗ)*

**ಮೂರು ದೇವರುಗಳು ಕಮಿಟಿಯ ಮೂರು ಸದಸ್ಯರಂತೆ, ಮೂವರ ಒಮ್ಮತ ಅಥವಾ ಬಹುಮತದ ಅಭಿಪ್ರಾಯದ ಮೇಲೆ ನಿರ್ಣಯವಿರುತ್ತದೆ.**

ಅಂದರೆ ಅಲ್ಲಾಹನ (ದೇವನ) ಕಾರ್ಖಾನೆಯ ಪ್ರಜಾತಂತ್ರವಾಗಿದೆ. ಕ್ರೈಸ್ತರ ಮೂರು ದೇವರು ಕಮಿಟಿಯ ಮೂರು ಸದಸ್ಯರಂತಿದ್ದಾರೆ ಎಂದು ಹೇಳುವುದು ಅತಿಶಯೋಕ್ತಿಯೇನಲ್ಲ ಮತ್ತು ಅವರ ವಾದದನ್ವಯ ಆ ಮೂವರ ಒಮ್ಮತಾಭಿಪ್ರಾಯದಿಂದಲೇ ಪ್ರತಿಯೊಂದು ಆಜ್ಞೆ ಹೊರಡಿಸಲಾಗುತ್ತದೆ ಅಥವಾ ಬಹುಮತದೊಂದಿಗೆ ನಿರ್ಣಯ ಕೈಗೊಳ್ಳಲಾಗುತ್ತದೆ. ಅಂದರೆ ದೇವನ ಕಾರ್ಯವೂ ಸಹ ಪ್ರಜಾತಂತ್ರ ಸರಕಾರದಂತಾಯಿತು. ಅಂದರೆ ಅವರ ದೇವರಿಗೂ ಸಹ ವೈಯಕ್ತಿಕ ಆಡಳಿತ ನಡೆಸುವ ಸಾಮರ್ಥ್ಯವಿಲ್ಲ. ಎಲ್ಲವು ಕೌನ್ಸಿಲ್ ಮೇಲೆ ನಿರ್ಭಯವಾಗಿರುತ್ತದೆ.

**ಫಾದರಿ ನಮ್ಮ ನಬಿ(ಸ) ರವರು ಅತ್ಯಂತ ಅವಹೇಳನಕಾರಿ ಮತ್ತು ಹಾಸ್ಯಾಸ್ಪದ ರೀತಿಯ ಚಿತ್ರಗಳನ್ನು ಬಿಡಿಸುತ್ತಾರೆ, ಚಿತ್ರ ಬಿಡಿಸುವುದೇ ಬೇಕಾದರೆ ಯೇಸುವಿನ ಚಿತ್ರ ಬಿಡಿಸಬೇಕು ಅವರು ಮೂಸ ಹಾಗೂ ಯುಶೀನ ಮುಖಾಂತರ ಲಕ್ಷಾಂತರ ಮಕ್ಕಳನ್ನು ಹತ್ಯೆಗೈದಿದ್ದಾರೆ.**

ಅಂತೂ ಕ್ರೈಸ್ತರ ದೇವನು ಸಮ್ಮಿಶ್ರ ದೇವನಾಗಿದ್ದಾನೆ. ನೋಡಬಯಸುವವರು ನೋಡಬಹುದಾಗಿದೆ. ಫಾದರಿ ಸಾಹೇಬರುಗಳು ಇಂತಹ ದೇವರ ಮೇಲಂತೂ ಗರ್ವಪಡುತ್ತಾರೆ. ಆದರೆ ಇಸ್ಲಾಂ ಧರ್ಮ ಇಂತಹ ಅವಿವೇಕದಿಂದ ಪವಿತ್ರವಾಗಿದೆ. ಹಗಲಿರುಳು ತಮ್ಮ ಕುತಂತ್ರಗಳಿಂದ ಅಲ್ಲಾಹನ ಪವಿತ್ರವಾದ ಮತ್ತು ಸತ್ಯಸಂಧಕ ಪ್ರವಾದಿಯನ್ನು ಮಿಥ್ಯವಾದಿ ಎನ್ನುವುದೇ ಅವರ ಕಾರ್ಯವಾಗಿದೆ. ಅವರನ್ನು ಅವಹೇಳನ ಮಾಡುತ್ತಿದ್ದಾರೆ ಆ ಪ್ರಕಾಶಮಯ ಮುಖವನ್ನು ಕೆಡಿಸಿ ಚಿತ್ರಿಸುತ್ತಿದ್ದಾರೆ.

ಕೆಲ ದುಷ್ಟ ಚರಿತ್ರೆಯ ಪಾದ್ರಿಗಳು ತಮ್ಮ ಗ್ರಂಥಗಳಲ್ಲಿ ನಮ್ಮ ಪ್ರವಾದಿಯರ ಚಿತ್ರವನ್ನು ಒಬ್ಬ ಹತ್ಯೆಗಾರ ವ್ಯಕ್ತಿಯಂತೆ, ಕ್ರೋಧಿತನಾಗಿ ಕೈಯಲ್ಲಿ ಒಂದು ನಗ್ನ ಖಡ್ಗ ಹಿಡಿದು ನಿಂತು ಸಾಧುರೂಪದ ಕ್ರೈಸ್ತರನ್ನು ಹತ್ಯೆ ಮಾಡಬಯಸುವಂತೆ ಚಿತ್ರಿಸುತ್ತಾರೆ.

ಈ ರೀತಿಯ ಪತ್ರಿಕೆಯ ಬರಹದ ಉದ್ದೇಶವು ನಾವು ದೀರ್ಘ ಸಮಯದ ಅನುಭವದಿಂದ ಪರೀಕ್ಷಿಸಿದೆವು. ಆ ಜನರು ಪದೇ ಪದೇ ಅಪರಾದಿ ಹಾಗೂ ನಿರುತ್ತರರಾಗಿಯೂ ಆರೋಪ ಮಾಡುವುದರಿಂದ ಹಿಂಜರಿಯುವುದಿಲ್ಲ. ಅಲ್ಲಾಹನ ಪವಿತ್ರ ಪ್ರವಾದಿಗಳ ಮತ್ತು ಅವರ ಅನುಯಾಯಿಗಳ ಜೀವನ ಅಲ್ಲಾಹನಿಗಾಗಿ ಮಾತ್ರ ಸಮರ್ಪಣೆಗೊಂಡಿದ್ದವು. ಅವರು ಭಯಭಕ್ತಿಯ ಸೂಕ್ಷ್ಮ ಮಾರ್ಗಗಳನ್ನು ಕಲಿಸಿಕೊಟ್ಟರು. ಅಂಥವರನ್ನು ಕೆಟ್ಟ ಭಾಷೆಯಲ್ಲಿ ಬಯ್ಯುವುದರಿಂದ ಈ ಜನರು ಹಿಂಜರಿಯಲಿಲ್ಲ. ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ನಿಂದಿಸುತ್ತಾ ಅತ್ಯಂತ ಅಪವಿತ್ರ ಸಿನಿಮಾ ತಯಾರಿಸುತ್ತಾರೆ ಮತ್ತು ಕೆಟ್ಟದಾಗಿ ಅವರನ್ನು ಚಿತ್ರಿಸಿ ತೋರಿಸುತ್ತಾರೆ.

**ದುಷ್ಕರ್ಮಿಗಳಾದ ಫಾದರಿಗಳು ನಮ್ಮ ನಬಿ(ಸ) ರವರಿಗೆ ಲಕ್ಷಗಟ್ಟಲೆ ಬೈಯ್ಗುಳಗಳನ್ನು ಹಾಕಿ ನಮ್ಮ ಹೃದಯಗಳನ್ನು ಘಾಸಿಗೊಳಿಸಿದ್ದಾರೆ.**

ಈಗ ಇಂತಹ ಸುಳ್ಳುಗಾರರೊಂದಿಗೆ ಮೌಖಿಕ ಚರ್ಚೆ ಹೇಗೆ ಯಶಸ್ಸು ಗಳಿಸಲು ಸಾಧ್ಯ? ನಾವು ಇಂತಹ ಸುಳ್ಳುಗಾರರಿಗೆ ಉತ್ತರ ನೀಡುವ ಮೂಲಕ ಅಪರಾದಿಯನ್ನಾಗಿ ಮಾಡಬಹುದು. ಆದರೆ ಅವರ ಬಾಯಿ ಹೇಗೆ ಮುಚ್ಚಿಸುವುದು. ಅವರ ಕೆಟ್ಟ ನಾಲಿಗೆಯ ಮೇಲೆ ಯಾವ ಚೀಲವನ್ನು ಹಾಕಬೇಕು? ಅವರ ಬಯ್ಯುವ ಮುಖಗಳ ಮೇಲೆ ಯಾವ ಬೀಗ ಹಾಕಬೇಕು? ಏನು ಮಾಡಬೇಕು? ಅಯೋಗ್ಯ ಇಮಾಮುದ್ದೀನ್ ಆ ಪವಿತ್ರವಾದ ನಬಿ(ಸ) ರವರಿಗೆ ಕೆಟ್ಟ ಬೈಗಳಗಳನ್ನು ಹಾಕಿದ್ದು ಯಾರು ತಾನೆ ಅರಿಯುಲಿಲ್ಲ? ಅದರಿಂದ ಮುಸಲ್ಮಾನರ ಹೃದಯುಗಳು ನುಚ್ಚುನೂರಾದವು. ನೂರ್ ಅಫ್ಶಾಂ ಪತ್ರಿಕೆ ಲೂದಿಯಾನದಿಂದ ಹೊರಡುತ್ತದೆ. ಈ ವಾರ ಪತ್ರಿಕೆಯಲ್ಲಿ ಎಂತೆಂತಹ ಸುಳ್ಳುಗಳನ್ನು ಇಸ್ಲಾಮಿನ ಕುರಿತು ಬರೆಯುತ್ತಾರೆ. ರಿವಾಡಿಯ ಫಾದರಿ, ಮುಸಲ್ಮಾನರಿಗೆ ಎಷ್ಟೊಂದು ಪೀಡಿಸಿದ್ದಾರೆ ಮತ್ತು (ನೌಝುಬಿಲ್ಲಾಹ್) ನಬಿ ಶ್ರೇಷ್ಠರಿಗೆ(ಸ) ಡಕೆತಿ, ಕಳ್ಳ ಮತ್ತು ದಾರಿಗಳ್ಳ ಎಂದಿದ್ದಾರೆ. ಎಲ್ಲಿತನಕ ಬರೆಯಲು ಸಾಧ್ಯ. ಆ ದುಷ್ಕರ್ಮಿ ಪಾದರಿಗಳು ನಮ್ಮ ನಬಿ(ಸ) ರವರಿಗೆ ಲಕ್ಷಾಂತರ ಬಯ್ಗುಳಗಳನ್ನು ಹಾಕಿ ನಮ್ಮ ಹೃದಯಗಳನ್ನು ಘಾಸಿಗೊಳಿಸಿದ್ದಾರೆ.

**ಯಾವ ಧರ್ಮ ಸತ್ಯವಾಗಿದೆ ಎಂಬುದು ದೇವರಿಂದ ತೀರ್ಪು ಪಡೆಯಬೇಕಾಗಿದೆ.**

ಅಂದಹಾಗೆ ಈ ದಿನಿನತ್ಯದ ಜಗಳಗಳಿಂದ ತೀರ್ಪು ಸಾಧ್ಯವಿಲ್ಲ. ಚರ್ಚಾಚರ್ಚೆ ಬೆಳೆಯುತ್ತಿದ್ದಂತೆ ಬೈಮನಸ್ಸು ಬೆಳೆಯತೊಡಗಿವೆ. ಈ ಚರ್ಚೆ ಮಿತಿಮೀರಿ ಹೋಗಿದೆ. ಆದುದರಿಂದ ನಿರಾಶೆಯ ಈ ಸಮಯದಲ್ಲಿ ನನ್ನ ದೃಷ್ಟಿಯಲ್ಲಿ ತೀರ್ಪು ಪಡೆಯಲು ಒಂದು ಅತ್ಯಂತ ಸರಳ ವಿಧಾನ ಏನೆಂದರೆ, ಪಾದರಿ ಸಾಹೇಬರುಗಳು ಒಪ್ಪಿದರೆ, ದೇವನಿಂದ (ಅಲ್ಲಾಹನಿಂದ) ತೀರ್ಪು ಪಡೆಯಬೇಕಾಗಿದೆ.

**ಒಟ್ಟು ಎಲ್ಲಾ ರೂಪದ ಆಸ್ತಿಗಳು ಅಂದರೆ ಹತ್ತು ಸಾವಿರ ರೂಪಾಯಿಗಳ ವೈಭಯುತ ಬಹುಮಾನದ ಪಂಥಾಹ್ವಾನ.**

ಪ್ರಥಮವಾಗಿ ನಾನು ಈ ವಿವರ ನೀಡುವುದು ಅವಶ್ಯಕವೇಕೆಂದರೆ ದೇವನಿಂದ ತೀರ್ಪು ಪಡೆಯಲು ನಾನು ತುಂಬಾ ಉತ್ಸುಕನಾಗಿದ್ದೇನೆ. ನನ್ನ ಬಾವನೆಯೇನೆಂದರೆ ಈ ರೀತಿ ದಿನನಿತ್ಯದ ಜಗಳ ಬಗೆಹರಿಯಲ್ಪಡುವುದು. ನನ್ನ ಪರವಾಗಿ ದೇವ ನಿರ್ಣಯ ಆಗದಿದ್ದರೆ ನಾನು ಹತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇಲ್ಲದ ನನ್ನ ಆಸ್ತಿಯ ಒಟ್ಟು ಮೊತ್ತವನ್ನು ಕ್ರೈಸ್ತರಿಗೆ ಕೊಡುವೆನು. ಮುಂಗಡ ರೂಪದಲ್ಲಿ ಮೂರು ಸಾವಿರ ರೂಪಾಯಿ ಅವರ ಬಳಿ ಜಮೆ ಮಾಡಬಹುದು, ಅಷ್ಟೊಂದು ಸಂಪತ್ತನ್ನು ನಾನು ಕಳೆದುಕೊಳ್ಳುವುದು, ನನಗೆ ತಕ್ಕುದಾದ ಶಿಕ್ಷೆಯೇ ಸರಿ. ಅಲ್ಲದೇ ನಾನು ನನ್ನ ಹಸ್ತಾಕ್ಷರದೊಂದಿಗೆ ಇದನ್ನು ಪತ್ರಿಕೆಯಲ್ಲಿ ಪ್ರಕಟಿಸುವೆನೆಂದು ಭರವಸೆ ನೀಡುತ್ತೇನೆ. ಕ್ರೈಸ್ತರು ಯಶಸ್ಸುಗೊಂಡರೆ ನಾನು ಪರಾಜಿತನಾದರೆ, ಆ ಪತ್ರಿಕೆಯಲ್ಲಿ ಯಾವ ಶರತ್ತು ಇರುವುದಿಲ್ಲ ಎಂಬ ವಚನ ಸಹ ನೀಡುತ್ತೇನೆ.

**ನಿರ್ಣಯದ ವಿಧಾನ: – ಉಭಯ ಪಕ್ಷಗಳು ತನ್ನ ತನ್ನ ಪಕ್ಷಗಳೊಂದಿಗೆ ಮೈದಾನದಲ್ಲಿ ಹಾಜರಾಗಬೇಕು ಮತ್ತು ಮಿಥ್ಯವಾದಿಗಳಿಗಾಗಿ ಅಲ್ಲಾಹನ ಶಾಪ ಪ್ರಕೋಪ ಬಯಸಬೇಕು.**

ದೈವಿಕ ತೀರ್ಪಿಗಿರುವ ವಿಧಾನವೆಂದರೆ ನನ್ನ ಎದುರಾಳಿಯಾಗಿ ಒಬ್ಬ ಆದರಣೀಯ ಪಾದರಿ ಸಾಹಿಬ್, ಎಲ್ಲಾ ಪಾದರಿಗಳಿಂದ ಆಯ್ಕೆಗೊಂಡು ಸ್ಪರ್ಧಿಸಲು ಮೈದಾನಕ್ಕೆ ಬರಬೇಕು. ಎಲ್ಲರ ಒಪ್ಪಿಗೆ ಅವನಲ್ಲಿ ಇರಬೇಕು. ನಾನು ಅದಕ್ಕೆ ತಯಾರಾಗಿರುತ್ತೇನೆ. ಅದಾದ ನಂತರ ನಾವಿಬ್ಬರು ತಮ್ಮ ತಮ್ಮ ಪಕ್ಷಗಳೊಂದಿಗೆ ನಿಗದಿತ ಮೈದಾನದಲ್ಲಿ ಹಾಜರಾಗಬೇಕು. ಅಲ್ಲಾಹನೊಂದಿಗೆ ಪ್ರಾರ್ಥನೆಯ ಮೂಲಕ ಈ ತೀರ್ಪು ಬಯಸಬೇಕು. ನಮ್ಮಿಬ್ಬರಲ್ಲಿ ಯಾವ ವ್ಯಕ್ತಿ ನಿಜವಾಗಿಯೂ ದೇವನ ದೃಷ್ಟಿಯಲ್ಲಿ ಸುಳ್ಳುಗಾರ ಮತ್ತು ಪ್ರಕೋಪಕ್ಕೆ ಅರ್ಹನೋ, ಅಲ್ಲಾಹನು ಅವನ ಮೇಲೆ ಒಂದು ವರ್ಷದೊಳಗೆ ತನ್ನ ಪ್ರಕೋಪ, ಶಾಪ ಇಳಿಯಬೇಕು, ಅವನು ತನ್ನ ಸ್ವಾಭಿಮಾನದ ರೀತಿ ಯಾವಾಗಲೂ ಮಿಥ್ಯವಾದಿಗಳಿಗೆ ಸುಳ್ಳುಗಾರ ಸಮುದಾಯದ ಮೇಲೆ ತನ್ನ ಪ್ರಕೋಪ ಇಳಿಸುತ್ತಾ ಬಂದಿದ್ದಾನೆ. ಉದಾಹರಣೆಗೆ ಫಿರ್‌ಔನ್, ನಮ್ರೂದ್, ನೂಹ್ ಮತ್ತು ಯಹೂದ್ ಸಮುದಾಯಗಳ ಮೇಲೆ ತನ್ನ ಶಿಕ್ಷೆ ಪ್ರಕಟಿಸಿದ್ದಾನೆ. ಪಾದರಿ ಸಾಹೇಬರುಗಳೇ ಈ ಮಾತು ನೆನಪಿಡಿರಿ. ಈ ಉಭಯೇತ್ರರ ಪ್ರಾರ್ಥನೆಗಳಲ್ಲಿ ಯಾವ ಪಕ್ಷದ ಮೇಲೆ ವಿಶೇಷ ಶಾಪವಿಲ್ಲ. ಬದಲು ಸುಳ್ಳುಗಾರರಿಗೆ ಶಿಕ್ಷೆ ಕೊಡಿಸುವ ಉದ್ದೇಶದಿಂದಾಗಿದೆ. ಅವನು ತನ್ನ ಸುಳ್ಳನ್ನು ಬಿಡಲು ಒಪ್ಪುತ್ತಿಲ್ಲ. ಒಂದು ಲೋಕವನ್ನು ಜೀವಂತಗೊಳಿಸಲಿಕ್ಕಾಗಿ ಒಬ್ಬನು ಮರಣ ಹೊಂದುವುದು ಲೇಸು. ಅಂತೂ ಒಂದು ಸುಳ್ಳು ಅದನ್ನು ಯಾವ ರೀತಿಯಲ್ಲೂ ಬಿಡಲು ಬಯುಸುವುದಿಲ್ಲ. ಅವನ ಅಸ್ತಿತ್ವ ಎಲ್ಲಾ ಗೊಂದಲಗಳಿಂದಲು ಮಿಗಿಲಾದುದಾಗಿದೆ. ಅದನ್ನು ತಡೆಗಟ್ಟುವುದು ಸತ್ಯವಂತರ ಕರ್ತವ್ಯವಾಗಿದೆ, ಅಂದಹಾಗೆ ಕ್ರೈಸ್ತರು ಅತ್ಯಂತ ಕುಟಿಲತನದಿಂದ ಇಸ್ಲಾಂ ಧರ್ಮವನ್ನು ಮನುಷ್ಯನು ನಿರ್ಮಿಸಿದ ಸುಳ್ಳು ಎನ್ನುತ್ತಾರೆ. ಕ್ರೈಸ್ತರು ನಿಜವಾಗಿಯೂ ಮನುಷ್ಯರನ್ನು ಪೂಜಿಸುವವರಾಗಿದ್ದಾರೆ ಎಂಬುದು ಇಸ್ಲಾಂ ಧರ್ಮದವರ ಹಾರ್ದಿಕ ನಿಲುವಾಗಿದೆ. ಹೀಗಿರುವಾಗ ಹೇಗೂ ಈ ಮಾತಿನ ತೀರ್ಪು ಬಯಸುವುದು ಹಿತವಲ್ಲವೇ?

**ಓ ಪಾದರಿ ಸಾಹೇಬರುಗಳೇ ಬನ್ನಿರಿ. ಪ್ರಾರ್ಥನೆಗಳ ಮೂಲಕ ಯುದ್ಧ ಸಾರುವ ಮತ್ತು ಅಲ್ಲಾಹನಿಂದ ತೀರ್ಪು ಬಯಸುವ. ಉಭಯೇತ್ರರಲ್ಲಿ ಯಾರು ಸತ್ಯವಂತರೋ ಅಲ್ಲಾಹನು ಅವಶ್ಯವಾಗಿ ಅವರ ಪರವಾಗಿರುವನು.**

ಅಂತೂ ಓ ಪಾಧರಿ ಸಾಹೇಬರುಗಳೇ! ನಾನು ಈ ಕೆಲಸಕ್ಕಾಗಿ ಪಣತೊಟ್ಟಿ ನಿಂತಿರುವೆನು, ನೀವು ಬಯಸುವುದಾದರೆ ಅಲ್ಲಾಹನ ಆಜ್ಞೆಯಿಂದ ಮತ್ತು ಅಲಾಹನ ತೀರ್ಪಿನಿಂದ ಮಿಥ್ಯ ಮತ್ತು ಸತ್ಯ ಅಂತರ ತಿಳಿಯಾಗಲಿ. ಬನ್ನಿರಿ ನಾವು ಒಂದು ಮೈದಾನದಲ್ಲಿ ಪ್ರಾರ್ಥನೆಗಳ ಮೂಲಕ ಯುದ್ಧ ಸಾರುವ. ಏಕೆಂದರೆ ಸುಳ್ಳು ಹೊರಬರಲಿ. ದಿಟವಾಗಿಯೂ ತಿಳಿದುಕೊಳ್ಳಿರಿ ದೇವರಿದ್ದಾನೆ ಮತ್ತು ಅವನು ಸರ್ವಶಕ್ತನಾಗಿದ್ದಾನೆ. ಅವನು ಯಾವಾಗಲೂ ಸತ್ಯವಾದಿಗಳ ಪರವಹಿಸುತ್ತಾನೆ. ಆದುದರಿಂದ ನಮ್ಮಿಬ್ಬರಲ್ಲಿ ಯಾರೂ ಸತ್ಯವಂತರೋ ಅಲ್ಲಾಹನು ಅವಶ್ಯವಾಗಿ ಅವರಿಗೆ ನೆರವು ನೀಡುವನು. ಈ ಮಾತು ನೆನಪಿರಲಿ. ಯಾವ ವ್ಯಕ್ತಿ ಅಲ್ಲಾಹನ ದೃಷ್ಟಿಯಲ್ಲಿ ನೀಚನು. ಅವನು ಈ ಯುದ್ಧದ ನಂತರ ನೀಚನಾಗಿರುವನು ಮತ್ತು

ಅವನ ದೃಷ್ಟಿಯಲ್ಲಿ ಯಾರು ಪ್ರಿಯನೋ ಅವನು ಗೌರವ ಪಡೆಯುವನು. **ನನ್ನ ಬಯಕೆಯೇನೆಂದರೆ ಈ ಸ್ಪರ್ಧೆಯಲ್ಲಿ ಡಾ॥ ಮಾರ್ಟಿನ್ ಕ್ಲಾರ್ಕ್ ಆಯ್ಕೆಯಾಗಬೇಕು. ಏಕೆಂದರೆ ಅವರು ಗಟ್ಟಿಮುಟ್ಟಿನವರಾಗಿದ್ದಾರೆ. ಯುವ ವಯಸ್ಸಿನವರಾಗಿದ್ದಾರೆ ಮತ್ತು ಆರೋಗ್ಯವಂತರಾಗಿದ್ದಾರೆ, ಡಾಕ್ಟರ್ ಆಗಿದ್ದಾರೆ.**

ನಾನು ಪಾದರಿ ಸಾಹೇಬರುಗಳಿಗೆ ಮತ್ತೆ ಮತ್ತೆ ಆಗ್ರಹಿಸುತ್ತೇನೆ. ಈ ರೀತಿಯ ಪ್ರಾರ್ಥನಾ ವಿಧಾನ ಅವರ ಧರ್ಮ ಮತ್ತು ವಿಶ್ವಾಸಕ್ಕೆ ವಿರೋಧವಲ್ಲ. ಆದುದರಿಂದ ನಾವಿಬ್ಬರೂ ಪ್ರಾರ್ಥನೆ ಮಾಡುವ. ಓ ಅಲ್ಲಾಹನೆ ಈ ಸಮಯ ನಾವು ಎದುರಿಸಲು ಎರಡು ಪಕ್ಷಗಳಾಗಿ ನಿಂತೆವು. ಒಂದು ಪಕ್ಷ ಮರಿಯಮನ ಪುತ್ರ ಯೇಸುವನ್ನು ದೇವನೆಂದು ನಂಬುತ್ತಾರೆ ಮತ್ತು ಇಸ್ಲಾಮಿನ ನಬಿಯನ್ನು ಸತ್ಯವಾದಿಯೆಂದು ನಂಬುವುದಿಲ್ಲ, ಇನ್ನೊಂದು ಪಕ್ಷ ಮರಿಯಮನ ಪುತ್ರನನ್ನು ಪ್ರವಾದಿ ಎಂದು ನಂಬುತ್ತಾರೆ ಮತ್ತು ಅವನು ಕೇವಲ ದಾಸ ಮಾತ್ರ ಎಂದು ವಿಶ್ವಾಸ ಹೊಂದುತ್ತಾರೆ ಮತ್ತು ಇಸ್ಲಾಮಿನ ಪ್ರವಾದಿಯನ್ನು ನಿಜವಾಗಿಯೂ ಸತ್ಯ ಪ್ರವಾದಿ, ಯಹೂದ್ಯರು ಮತ್ತು ನಸಾರಗಳಲ್ಲಿ ತೀರ್ಪು ನೀಡುವನು ಅರಿಯುತ್ತಾನೆ. ಆದುದರಿಂದ ಈ ಎರಡೂ ಪಕ್ಷಗಳಲ್ಲಿ ಯಾವ ಪಕ್ಷ ನಿನ್ನ ದೃಷ್ಟಿಯಲ್ಲಿ ಸುಳ್ಳು ವಾದಿಯೋ ಅವನನ್ನು ಒಂದು ವರ್ಷದೊಳಗೆ ನಾಶಗೊಳಿಸು. ಮತ್ತು ನಿನ್ನ ಶಾಪ ಅವನ ಮೇಲೆ ಅವತರಿಸು. ಒಂದು ಪಕ್ಷ ದುಆ ಮಾಡಿದ ನಂತರ ಇನ್ನೊಂದು ಪಕ್ಷವು ಆಮೀನ್ ಎನ್ನಬೇಕು. ಆ ಪಕ್ಷ ದುಆ ಮಾಡಿದ ನಂತರ ಈ ಪಕ್ಷ ಆಮೀನ್ ಎನ್ನಬೇಕು.

ನನ್ನ ಹಾರ್ಧಿಕ ಅಭಿಲಾಷೆ ಏನೆಂದರೆ ಈ ಸ್ಪರ್ಧೆಗಾಗಿ ಡಾ॥ ಮಾರ್ಟಿನ್ ಕ್ಲಾರ್ಕ್ ಆಯ್ಕೆಯಾಗಬೇಕು. ಏಕೆಂದರೆ ಅವರು ಗಟ್ಟಿಮುಟ್ಟಿನವರಾಗಿದ್ದಾರೆ. ಯುವ ವಯಸ್ಸಿನವರಾಗಿದ್ದಾರೆ, ಉತ್ತಮ ಆರೋಗ್ಯವಂತರೂ ಆಗಿದ್ದಾರೆ. ಅಲ್ಲದೆ ಡಾಕ್ಟರ್ ಸಹ ಆಗಿದ್ದಾರೆ. ಅವರು ದೀರ್ಘ ವಯಸ್ಸಿನ ಬಂದೋಬಸ್ತು ಮಾಡಿಕೊಳ್ಳುವರು. ನಿಶ್ಚಯವಾಗಿಯೂ ಡಾ॥ ಮಾರ್ಟಿನ್ ಕ್ಲಾರ್ಕ್ ಸಾಹಿಬ್ ನಮ್ಮ ಈ ಬೇಡಿಕೆ ಒಪ್ಪುವರು ಎಂದು ಭಾವಿಸುತ್ತೇನೆ. ಏಕೆಂದರೆ ಅವರಿಗೆ ಮರಿಯಮನ ಪುತ್ರನನ್ನು ದೇವನನ್ನಾಗಿ ಮಾಡುವ ಹಂಬಲ ಬಹಳಷ್ಟಿದೆ. ಅವರು ಪಲಾಯನ ಮಾಡಿದರೆ ಅತ್ಯಂತ ದೌರ್ಭಾಗ್ಯವೇ ಸರಿ. ಅವರು ಪಲಾಯನ ಮಾಡಿದರೆ ಅವರ ದಾಸರಲ್ಲಿ ಫಾದರಿ ಇಮಾಮುದ್ದೀನ್ ಸಾಹಿಬ್ ಈ ಸ್ಪರ್ಧೆಗೆ ಅರ್ಹರಾಗಿದ್ದಾರೆ. ಅವರು ಸಹ ಮರಿಯಮನ ಪುತ್ರನನ್ನು ದೇವನನ್ನಾಗಿ ಮಾಡಲು ಸರ್ವ ಮಾನವ ಪ್ರಯತ್ನಗಳನ್ನು ಮಾಡಿರುತ್ತಾರೆ. ಮತ್ತು ಸೂರ್ಯನ ಮೇಲೆ ಉಗುಳಿದ್ದಾರೆ. ಅಲ್ಲಾಹನ ಶಿಕ್ಷೆ ಅವರನ್ನೂ ಬಿಡುವುದಿಲ್ಲ ಎಂದು ಭಾವಿಸಿ ಪಲಾಯನ ಮಾಡಿದರೆ ಹಿಸಾಮುದ್ದೀನ್ ಅಥವಾ ಠಾಕೂರ್‌ದಾಸ್ ಅಥವ ಥಾಮಿಸ್ ಹಾವೆಲ್ ಇಲ್ಲದಿದ್ದರೆ ಅಂತಿಮವಾಗಿ ಫತಹ ಮಸೀಹ್ ಮೈದಾನಕ್ಕೆ ಬರಲಿ. ಇಲ್ಲ ಯಾರಾದರು ಇನ್ನಿತರ ಪಾದರಿ ಸಾಹಿಬ್ ಹೊರ ಬರಲಿ, ಈ ಪತ್ರಿಕೆ ಪ್ರಕಟಗೊಂಡ ನಂತರ ಎರಡು ತಿಂಗಳವರೆಗೆ ಯಾರು ಸಹ ಬರಲಿಲ್ಲ ಎಂದಾದರೆ, ಕೇವಲ ಶೈತಾನ ರೀತಿಯ ನೆಪ ಒಡ್ಡಿದರೆ ಪಂಜಾಬ್ ಮತ್ತು ಭಾರತದ ಎಲ್ಲಾ ಪಾದರಿಗಳ ಸುಳ್ಳಿನ ಮೇಲೆ ಮುದ್ರೆ ಹಾಕಿದಂತಾಗುವುದು. ಮತ್ತೆ ಅಲ್ಲಾಹನು ತನ್ನ ರೀತಿಯಲ್ಲಿ ಸುಳ್ಳನ್ನು ಕಿತ್ತು ಹಾಕುವನು. ನೆನಪಿಡಿರಿ ಅವಶ್ಯವಾಗಿ ಕಿತ್ತು ಹಾಕುವನು. ಏಕೆಂದರೆ ಈಗ ಆ ಸಮಯ ಒದಗಿ ಬಂದಿದೆ. **ವಸ್ಸಲಾಮು ಅಲಾ ಮುನಿತ್ತಬಲಿಲ್ ಹುದಾ** (ಅಂಜಾಮ್ ಆಥಮ್, ರೂಹಾನಿ ಖಝಾಈನ್, ಸಂಪುಟ–11, ಖುದಾ ಕಾ ಫೈಸ್ಲ. ಪುಟ–34–44)

ಮುಂದಿನ ಸಂಚಿಕೆಯಲ್ಲಿ ನಾವು ಇನ್‌ಶಾಅಲ್ಲಾಹ್ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥಾಹ್ವಾನ ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 11ರ ಉಳಿದ ಭಾಗ)*

ಖುರ್‌ಆನ್ ಅನ್ನು ಸಂಕಲನಗೊಳಿಸಲು ಹಝ್ರತ್ ಅಬು ಬಕರ್(ರ) ಅವರ ಮನಸ್ಸನ್ನು ತೆರೆದನು. ಪ್ರವಾದಿ ಮುಹಮ್ಮದ್(ಸ) ಅವರ ಮೊದಲ ಖಲೀಫ ಅವರ ಬಗ್ಗೆ ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿದನು: **ಸಾನಿಯಸ್‌ನೈನಿ ಇಝ್‌ಹುಮಾ ಫಿಲ್‌ಗಾರಿ** (ಅಲ್‌ಅನ್‌ಕಬೂತ್:40) ಇಬ್ಬರಲ್ಲಿ ಒಬ್ಬರು. ಪವಿತ್ರ ಖುರ್‌ಆನ್ ಅನ್ನು ಅವತರಿಸಿದ ಅಲ್ಲಾಹನು ಅವರ ಮನಸ್ಸನ್ನು ತೆರೆದನು ಮತ್ತು ಅವರ ಮೂಲಕವೇ ತನ್ನ ವಾಗ್ದಾನವನ್ನು ಪೂರೈಸಿದನು **"ವ ಇನ್ನಾ ಲಹೂ ಲಹಾಫಿಝೂನ್"** (ಸೂರ: ಅಲ್‌ಹಿಜರ್: 11) **ಇನ್ನ ಅಲೈನಾ ಜಮ್‌ಅಹೂ ವ ಖುರ್‌ಆನಹೂ** (ಅಲ್‌ಖ್ಯೆಯಿಮ: 18)

ಪವಿತ್ರ ಖುರ್‌ಆನ್ ಅನ್ನು ಪುನರುತ್ಥಾನದ ದಿನದವರೆಗೆ ಇರಿಸುವುದು, ಸಂಕಲಿಸುವುದು ಮತ್ತು ಸಂರಕ್ಷಿಸುವುದು ಅಲ್ಲಾಹನ ಜವಾಬ್ದಾರಿಯಾಗಿದೆ. ಬುಖಾರಿಯಲ್ಲಿ ಒಂದು ವರದಿ ಹೀಗಿದೆ: ಬೇರೆ ಬೇರೆ ಸ್ಥಳಗಳಲ್ಲಿ ಬರಹದ ರೂಪದಲ್ಲಿರುವ ಪವಿತ್ರ ಖುರ್‌ಆನ್ ಅನ್ನು ಒಂದು ಕಡೆ ಸಂಕಲಿಸುವುದಕ್ಕೆ ಅಲ್ಲಾಹನು ಹಝ್ರತ್ ಝೈದ್ ಬಿನ್ ಸಾಬಿತ್(ರ)ರವರನ್ನು ಮನಸ್ಸಿಗೆ ಅರ್ಥೈಸಿದನು ಅವರು ಪವಿತ್ರ ಖುರ್‌ಆನ್ ಅನ್ನು ತಾಳೆ (ಮರದ) ಫಲಕಗಳು ಮತ್ತು ಕಲ್ಲಿನ ಸ್ಲೇಟುಗಳು ಮತ್ತು ಜನರ ಹೃದಯಗಳಲ್ಲಿ ಸಂರಕ್ಷಿಸಿ ಒಂದುಗೂಡಿಸಿದರು.

ಗಮನಿಸಬೇಕಾದ ವಿಷಯವೆಂದರೆ ಹಝ್ರತ್ ಝೈದ್ ಬಿನ್ ಸಾಬಿತ್(ರ) ಅವರು ಪವಿತ್ರ ಖುರ್‌ಆನ್ ಅನ್ನು ರಹಸ್ಯವಾಗಿ ಒಂದುಗೂಡಿಸುವ ಈ ಕಾರ್ಯವನ್ನು ನಿರ್ವಹಿಸಲಿಲ್ಲ ಅದರ ಬದಲು ಅವರು ಮದೀನಾದಲ್ಲಿ ಕುಳಿತು ತಮ್ಮ ಈ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು ಮತ್ತು ಆ ಸಮಯದಲ್ಲಿ ಮದೀನಾದಲ್ಲಿ ಹಝ್ರತ್ ಉಮರ್(ರ), ಹಝ್ರತ್ ಉಸ್ಮಾನ್(ರ), ಹಝ್ರತ್ ಅಲಿ(ರ) ಮತ್ತು ದೊಡ್ಡ ದೊಡ್ಡ ಸಹಾಬರವರು ಸಹ ಉಪಸ್ಥಿತರಿದ್ದರು, ಅವರ ಉಪಸ್ಥಿತಿಯಲ್ಲಿ ಯಾವುದೇ ಸೇರ್ಪಡೆ ಅಥವಾ ಅಳಿಸುವಿಕೆಗೆ ಯಾವುದೇ ಸಾಧ್ಯತೆ ಇರಲಿಲ್ಲ ಮತ್ತು ಅಂತಹ ಅನುಮಾನವನ್ನು ಯಾರೂ ವ್ಯಕ್ತಪಡಿಸಲಿಲ್ಲ. ಮತ್ತು ಪವಿತ್ರ ಖುರ್‌ಆನ್‌ನ ಈ ದೃಢೀಕರಿಸಿದ ಪ್ರತಿಗಳನ್ನು ಪ್ರವಾದಿ ಮುಹಮ್ಮದ್(ರ) ಅವರ ಮಡದಿ ಹಾಗೂ ಹಝ್ರತ್ ಉಮರ್(ರ)ರವರ ಪುತ್ರಿಯಾದ ಹಝ್ರತ್ ಉಮ್ಮುಲ್ ಮುಮಿನೀನ್ ಹಝ್ರತ್ ಹಫ್ಸ(ರ)ರವರ ಬಳಿ ರಕ್ಷಣೆಯಲ್ಲಿ ಇರಿಸಲಾಯಿತು. ಮತ್ತು ಹಝ್ರತ್ ಉಸ್ಮಾನ್(ರ) ಅವರ ಖಲೀಫತ್ ಅವಧಿಯಲ್ಲಿ ಇಸ್ಲಾಮಿಕ್ ಸರ್ಕಾರದ ಗಡಿಗಳು ಅರಬ್ ಅಲ್ಲದ ಪ್ರದೇಶಗಳ ತನಕ ವಿಸ್ತಾರಗೊಂಡಾಗ ಮತ್ತು ಅರಬ್ಬರಲ್ಲದವರು ಮತ್ತು ದೂರದ ಅರಬ್ ಬುಡಕಟ್ಟು ಜನರು ಇಸ್ಲಾಂಗೆ ಸೇರ್ಪಡೆಯಾದರು. ಅರ್ಮೇನಿಯಾ ಮತ್ತು ಅಜೆರ್ಬೈಜಾನ್ ಸಹ ಇಸ್ಲಾಂಗೆ ಮತಾಂತರಗೊಂಡಾಗ, ಮೂಲ ಅಧಿಕೃತ ಪವಿತ್ರ ಖುರ್‌ಆನ್‌ನ ಪ್ರತಿಗಳನ್ನು ವಿವಿಧ ದೇಶಗಳಿಗೆ ಕಳುಹಿಸುವುದು ಸೂಕ್ತ ಮತ್ತು ಅಗತ್ಯವೆಂದು ಪರಿಗಣಿಸಲಾಯಿತು. ಹೀಗೆ ಹಝ್ರತ್ ಉಸ್ಮಾನ್(ರ)ರವರು ಪವಿತ್ರ ಖುರ್‌ಆನ್‌ನ ಮೂಲ ಪ್ರತಿಯನ್ನು ಹಝ್ರತ್ ಹಫ್ಸ(ರ)ಅವರಿಂದ ತರಿಸಿ ಹಝ್ರತ್ ಝೈದ್ ಬಿನ್ ಸಾಬಿತ್(ರ), ಹಝ್ರತ್ ಅಬ್ದುಲ್ಲಾ ಬಿನ್ ಝುಬೈರ್(ರ), ಹಝ್ರತ್ ಸೀದ್ ಬಿನ್ ಆಸ್(ರ(), ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಅಲ್‌ಹಾರಿಸ್(ರ) ಅವರನ್ನು ಅದರ ನಕಲು ಮಾಡಲು ಆದೇಶಿಸಿದರು, ಆದ್ದರಿಂದ ಅವರು ಅದರ ನಕಲುಗಳನ್ನು ಮಾಡಿದರು ಮತ್ತು ಮದೀನಾ ಮುನಾವ್ವರದಲ್ಲಿ ಹಿರಿಯ ಸಹಾಬ ಅವರ ಸಮ್ಮುಖದಲ್ಲಿ ಇದೆಲ್ಲವೂ ಸಂಭವಿಸಿತು. ಅದೇ ರೀತಿ ಪವಿತ್ರ ಖುರ್‌ಆನ್‌ನ ಮೂಲ ಪ್ರತಿಯನ್ನು ಹಝ್ರತ್ ಹಫ್ಸಾ(ರ) ಅವರಿಗೆ ಹಿಂದಿರುಗಿಸಲಾಯಿತು. (ಬುಖಾರಿ, ಕಿತಾಬ್ ಅಲ್–ತಫ್ಸೀರ್) ಆಕ್ಷೇಪಿಸುವವನ ಸಂಪೂರ್ಣ ಗಮನವೂ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಸ್ಮಾನ್(ರ)ರವರ ಖಿಲಾಫತ್ ಅವಧಿಯಲ್ಲಿ ಪವಿತ್ರ ಖುರ್‌ಆನ್ ಅನ್ನು ಸಂಗ್ರಹಿಸಲಾಯಿತು ಮತ್ತು ಅದರ ಪ್ರತಿಗಳನ್ನು ಮಾಡಿರುವ ಕಡೆ ಇತ್ತು ಅವನು ಸ್ವತಃ ತಪ್ಪು ಗ್ರಹಿಯಲ್ಲಿದ್ದು ಬೇರೆಯವರನ್ನು ಸಹ ತಪ್ಪಾಗಿಸುವ ಪ್ರಯತ್ನದಲ್ಲಿದ್ದನು. ಪವಿತ್ರ ಖುರ್‌ಆನ್ ಅನ್ನು ದೀರ್ಘಕಾಲದವರೆಗೆ ಸಾವಿರಾರು ಸಹಚರರು ಮತ್ತು ಅನುಯಾಯಿಗಳ ಕಂಠಪಾಠ ಮಾಡಿದ್ದರು ಮತ್ತು ತಮ್ಮ ಎದೆಯಲ್ಲಿ ಸಂರಕ್ಷಿಸಲಾಗಿದೆ ಎಂದು ಆಕ್ಷೇಪಿಸುವವರು ನೆನಪಿನಲ್ಲಿಟ್ಟುಕೊಳ್ಳಬೇಕು. **(ಮುಂದುವರಿಯುವುದು)**

## *126 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 126ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 24, 25 ಮತ್ತು 26ನೇ ಡಿಸೆಂಬರ್ 2021 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ.

**ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

# ಅಲ್ಲಾಹನು ಪವಿತ್ರ ಖುರ್‌ಆನ್‌ನ ರಕ್ಷಕನಾಗಿದ್ದಾನೆ.

**(ಪವಿತ್ರ ಖುರ್‌ಆನ್‌ನ 26 ವಚನಗಳ ಕುರಿತು ಎತ್ತಿದ ಆಕ್ಷೇಪದ ಉತ್ತರ)**

**ಮುಹಮ್ಮದ್ ಹಮೀದ್ ಕೌಸರ್,**
**ನಾಝಿರ್ ದಾವತ್ ಇಲಲ್ಲಾಹ್ ಉತ್ತರ ಭಾರತ, ಖಾದಿಯಾನ್.**

**(ಭಾಗ: 2)**

## ಜಿಬ್ರೀಲ್ ಅಲೈಹಿಸ್ಸಲಾಮ್ ಅವರ ಮೂಲಕ ಪವಿತ್ರ ಖುರ್‌ಆನಿನ ಖುರಾನ್ ಸಂರಕ್ಷಣೆ

ಸರ್ವಶಕ್ತನಾದ ಅಲ್ಲಾಹನು, ಸುರಕ್ಷತೆ ಮತ್ತು ತೀವ್ರ ಎಚ್ಚರಿಕೆಯ ದೃಷ್ಟಿಯಿಂದ, ಹಝ್ರತ್ ಜಿಬ್ರೀಲ್ ಮತ್ತು ಸೈಯದುನ ಮುಹಮ್ಮದ್(ಸ) ಅವರು ಪ್ರತಿ ರಂಜಾನ್‌ನಲ್ಲಿ ಅಲ್ಲಿಯ ವರೆಗೆ ಎಷ್ಟು ಖುರ್‌ಆನ್ ಅವತಿಸುದ್ದೇಯೋ ಅಷ್ಟನ್ನು ಪುನರಾವರ್ತಿಸುತ್ತಿದ್ದರು ತದನಂತರ ಪ್ರವಾದಿ(ಸ) ಅವರ ಜೀವನದ ಕೊನೆಯ ವರ್ಷವಾಗಿದ್ದಾಗ ಪವಿತ್ರ ಖುರ್‌ಆನ್ ಅನ್ನು ಎರಡು ಸಲ ಪುನರಾವರ್ತಿಸಿದರು. ಆದ್ದರಿಂದ ಉಮ್ಮುಲ್-ಮುಮಿನೀನ್ ಹಝ್ರತ್ ಆಯಿಶಾ(ರ.ಅ) ಹೇಳುತ್ತಾರೆ ಹಝ್ರತ್ ಫಾತಿಮಾ(ರ.ಅ) ಹೇಳಿದರು ಪವಿತ್ರ ಪ್ರವಾದಿ(ಸ) ರವರು ನನ್ನ ಕಿವಿಯಲ್ಲಿ ಹೇಳಿದರು ಪ್ರತಿ ವರ್ಷ ಜಿಬ್ರೀಲ್(ಅ) ನನ್ನೊಂದಿಗೆ ಒಂದು ಬಾರಿ ಖುರ್‌ಆನ್ ಪಠಿಸುತ್ತಿದ್ದರು. ಆದರೆ ಈ ವರ್ಷ ಅವರು ಎರಡು ಬಾರಿ ಪಠಿಸಿದರು, ನನ್ನ ನಿಧನದ ಸಮಯ ಹತ್ತಿರದಲ್ಲಿದೆ ಎಂದು ನಾನು ಭಾವಿಸುತ್ತೇನೆ.

**ಇನ್ನ ಜಿಬ್ರೀಲ ಕಾನ ಯುಆರಿಝುನಿಲ್ ಖುರ್‌ಆನ ಕುಲ್ಲ ಸನತಿನ್ ವ ಇನ್ನಹು ಆರಝುನಿಲ್ ಆಮ ಮರ್ರತೈನಿ (ಸಹೀಹ್ ಬುಖಾರಿ, ಕಿತಾಬುತ್ತಫ್ಸೀರ್)**

ಅನುವಾದ: ಹಝ್ರತ್ ಆಯೇಶಾ(ರ) ಅವರು ವರದಿ ಮಾಡುತ್ತಾರೆ ಪ್ರವಾದಿ(ಸ)ರವರು ತಾವು ಮರಣಹೊಂದಿದ ತಮ್ಮ ಅನಾರೋಗ್ಯದಲ್ಲಿ ತಮ್ಮ ಮಗಳು ಹಝ್ರತ್ ಫಾತಿಮಾ(ರ) ಅವರಿಗೆ ಹೇಳಿದರು: ಪ್ರತಿ ವರ್ಷ ಜಿಬ್ರೀಲ್(ಅ) ನನ್ನೊಂದಿಗೆ ಒಂದು ಬಾರಿ ಖುರ್‌ಆನ್ ಪಠಿಸುತ್ತಿದ್ದರು. ಆದರೆ ಈ ವರ್ಷ ಅವರು ಎರಡು ಬಾರಿ ಪಠಿಸಿದರು,

ಈಗ, ಈ ದೈವಿಕ ಏರ್ಪಾಡಿನ ನಂತರ, ಪ್ರಸ್ತುತ ಖುರ್‌ಆನಿನಲ್ಲಿ ಯಾವುದೇ ಹೆಚ್ಚಳ ಅಥವಾ ಕಡಿಮೆಯಾಗುವ ಸಾಧ್ಯತೆಯಿಲ್ಲ.

## ಪವಿತ್ರ ಖುರ್‌ಆನಿನ ಸಂರಕ್ಷಣೆಯ ಕುರಿತು ಪೌರಸ್ತ್ಯರು ಸಹ ಒಪ್ಪಿಕೊಳ್ಳುತ್ತಾರೆ

ಇಂದು ಮುಸಲ್ಮಾನರ ಕೈ ಮತ್ತು ಹೃದಯಗಳಲ್ಲಿ ಭದ್ರವಾಗಿರುವ ಪವಿತ್ರ ಖುರ್‌ಆನ್ ಪ್ರವಾದಿ ಮುಹಮ್ಮದ್(ಸ) ಅವರಿಗೆ ಅವತೀರ್ಣವಾದ ಖುರಾನ್ ಆಗಿದೆ ಎಂದು ಪೌರಸ್ತ್ಯರು (ಓರಿಯಂಟಲಿಸ್ಟ್‌ಗಳು) ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ ಎಂಬುದನ್ನೂ ಇಲ್ಲಿ ಉಲ್ಲೇಖಿಸಬೇಕಾಗಿದೆ.

ಸರ್ ವಿಲಿಯಂ ಮ್ಯೂರ್ ಅವರ ಅಭಿಪ್ರಾಯ: ಸರ್ ವಿಲಿಯಂ ಮ್ಯೂರ್ ಬರೆಯುತ್ತಾರೆ: "ಪ್ರಪಂಚದ ಪರದೆಯ ಮೇಲೆ ಯಾವುದೇ ವಿರೂಪ ಅಥವಾ ಬದಲಾವಣೆಯಿಲ್ಲದೆ ಹನ್ನೆರಡು ನೂರು ವರ್ಷಗಳ ಸುದೀರ್ಘ ಅವಧಿಯವರೆಗೆ ಅದರ ಮೂಲ ರೂಪದಲ್ಲಿ ಸಂರಕ್ಷಿಸಲ್ಪಟ್ಟಿರುವ ಪವಿತ್ರ ಖುರಾನ್ ಹೊರತುಪಡಿಸಿ ಯಾವುದೇ ಗ್ರಂಥವಿಲ್ಲ. ನಂತರ ಅವರು ಬರೆಯುತ್ತಾರೆ: "ನಮ್ಮ ಇಂಜೀಲ್‌ಗಳನ್ನು ಮುಸ್ಲಿಮರು ಪಠಿಸುತ್ತಿರುವ ಪವಿತ್ರ ಖುರ್‌ಆನ್‌ನೊಂದಿಗೆ ಹೋಲಿಸುವುದು ಪರಸ್ಪರ ಸಂಬಂಧವಿಲ್ಲದ ಎರಡು ವಿಷಯಗಳ ಹಾಗಿದೆ." ನಂತರ ಅವರು ಬರೆಯುತ್ತಾರೆ: "ಪ್ರವಾದಿ ಮುಹಮ್ಮದ್(ಸ) ಪವಿತ್ರ ಖುರ್‌ಆನ್ ಅನ್ನು ಜಗತ್ತಿಗೆ ಪ್ರಸ್ತುತಪಡಿಸಿದ ರೂಪದಲ್ಲಿ ಇನ್ನೂ ಇದೆ ಎಂಬುದಕ್ಕೆ ಸಂಪೂರ್ಣ ಆಂತರಿಕ ಮತ್ತು ಬಾಹ್ಯ ಸಾಕ್ಷ್ಯಗಳಿವೆ." ನಂತರ ಅವರು ಬರೆಯುತ್ತಾರೆ: ಪವಿತ್ರ ಖುರ್‌ಆನ್‌ನ ಪ್ರತಿಯೊಂದು ಆಯತ್‌ಗಳ ಬಗ್ಗೆ ನಾವು ಖಚಿತವಾಗಿ ಹೇಳಬಹುದೆಂದರೆ ಅದು ಮುಹಮ್ಮದ್‌ನಿಂದ ಇಂದಿನವರೆಗೆ ಅದರ ಮೂಲ ಮತ್ತು ಬದಲಾಗದ ರೂಪದಲ್ಲಿ ಉಳಿದು ಬಂದಿದೆ. (ಉಲ್ಲೇಖ ಲೈಫ್ ಆಫ್ ಮುಹಮ್ಮದ್ ಮುನ್ನುಡಿ ಪುಟ 21, 22, 25, 26)

ನೋಲ್ಡಕ್ ಕೀ ಅವರ ಅಭಿಪ್ರಾಯ: ಜರ್ಮನಿಯ ಪ್ರಸಿದ್ಧ ಕ್ರೈಸ್ತ ಪೌರಸ್ತ್ಯ (ಓರಿಯಂಟಲಿಸ್ಟ್) ಆಗಿರುತ್ತಾರೆ ಅವರು ಈ ಕಲೆಯಲ್ಲಿ ಮಾಸ್ಟರ್ ಎಂದು ಪರಿಗಣಿಸಲ್ಪಟ್ಟಿರುವ ನೋಲ್ಡ್ ಕೀ ಪವಿತ್ರ ಖುರ್‌ಆನ್ ಬಗ್ಗೆ ಬರೆಯುತ್ತಾರೆ: ಪ್ರಸ್ತುತ ಕಾಲದಲ್ಲಿರುವ ಪವಿತ್ರ ಖುರ್‌ಆನ್ ಸಹಾಬರವರ ಕಾಲದಲ್ಲಿದ್ದ ಖುರ್‌ಆನ್‌ನ ರೂಪದಲ್ಲಿಯೇ ಉಳಿದಿದೆ. ಅದೇ ರೀತಿ ಅವರು ಬರೆಯುತ್ತಾರೆ: "ಯುರೋಪಿಯನ್ ವಿದ್ವಾಂಸರ ಪವಿತ್ರ ಖುರ್‌ಆನಿನಲ್ಲಿ ಬದಲಾವಣೆಯಾಗಿದೆ ಎಂದು ಸಾಬೀತು ಪಡಿಸುವ ಪ್ರಯತ್ನ ಖಂಡಿತವಾಗಿಯು ವಿಫಲವಾಗಿದೆ. (ಎನ್ಸೈಕ್ಲೋಪೀಡಿಯಾ ಬ್ರಿಟಾನಿಕಾ ಖುರ್‌ಆನ್ ಪದದ ಅಡಿಯಲ್ಲಿ)

ಪ್ರೊಫೆಸರ್ ನಿಕೋಲ್ಸನ್ ಅವರ ಅಭಿಪ್ರಾಯ: ನಂತರ ಪ್ರಸಿದ್ಧ ಇಂಗ್ಲಿಷ್ ಕ್ರಿಶ್ಚಿಯನ್ ಓರಿಯೆಂಟಲಿಸ್ಟ್ ಆಫ್ ಇಂಗ್ಲೆಂಡಿನ ಪ್ರೊಫೆಸರ್ ನಿಕೋಲ್ಸನ್ ತಮ್ಮ ಇಂಗ್ಲಿಷ್ ಪುಸ್ತಕ "ಲಿಟರರಿ ಹಿಸ್ಟರಿ ಆಫ್ ಅರೇಬಿಯಾ" ನಲ್ಲಿ ಬರೆಯುತ್ತಾರೆ: ಇಸ್ಲಾಮ್ ಧರ್ಮದ ಪ್ರಾಚೀನ ಇತಿಹಾಸದ ಬಗ್ಗೆ ತಿಳಿಯಲು ಪವಿತ್ರ ಖುರ್‌ಆನ್ ಅದ್ಭುತ ಮತ್ತು ಯಾವುದೇ ಅವಮಾನ ಇಲ್ಲದ ಗ್ರಂಥವಾಗಿದೆ. ಮತ್ತು ನಿಸ್ಸಂದೇಹವಾಗಿಯೂ ಬೌದ್ಧಧರ್ಮ ಅಥವಾ ಕ್ರಿಶ್ಚಿಯನ್ ಧರ್ಮ ಅಥವಾ ಯಾವುದೇ ಪ್ರಾಚೀನ ಧರ್ಮವು ಇಸ್ಲಾಂ ಧರ್ಮದಲ್ಲಿ ಇರುವಂತಹ ಅಧಿಕೃತ ಆಧುನಿಕ ದಾಖಲೆಯನ್ನು ಹೊಂದಿಲ್ಲ." (ಅರಬ್ ಕೀ ಅದಬಿ ತಾರೀಖ್)

ವಿರೋಧಿಗಳ ಅಭಿಪ್ರಾಯಗಳ ನಂತರ, **ಅಲ್-ಫಜಲ್ ಮಾ ಶಾಹಿದತ್ ಬಿಹಿ ಅಲ್-ಆದಾ** ಎಂದು ಬಹಿರಂಗವಾಗಿ ಹೇಳಬಹುದು. ಸದ್ಗುಣವೆಂದರೆ ಶತ್ರುಗಳು ಸಾಕ್ಷಿಯಾಗುತ್ತಾರೆ.

**(ಆಕ್ಷೇಪಣೆ ಸಂಖ್ಯೆ 2)**

ಆಕ್ಷೇಪಿಸುವವರು ಸಹೀಹ್ ಬುಖಾರಿಯ ಕರಲವು ಹದೀಸ್‌ಗಳನ್ನು ಉಲ್ಲೇಖಿಸಿ ಪ್ರವಾದಿ ಮುಹಮ್ಮದ್(ಸ) ರವರ ನಂತರ ಪ್ರವಾದಿ(ಸ)ರವರ ಸಂದೇಶವನ್ನು ತಿಳಿದ ನಾಲ್ಕು ಸಹಾಬಿಗಳು ಅವರು ಅನ್ಸಾರ್‌ಗಳಾಗಿದ್ದರು ಇವರು ಪವಿತ್ರ ಖುರ್‌ಆನ್ ಅನ್ನು ಸಂಗ್ರಹಿಸಿದರು ತದ ನಂತರ ಹಝ್ರತ್ ಅಬು ದರ್ದಾ(ರ) ಅವರನ್ನು ಉಲ್ಲೇಖಿಸಿದ್ದಾರೆ ಎಂದು ಆಕ್ಷೇಪಕ ಬರೆದಿದ್ದಾರೆ.

**ಉತ್ತರ:** ಆಕ್ಷೇಪಿಸುವವರ ಆಕ್ಷೇಪಣೆಗೆ ಪ್ರತಿಕ್ರಿಯೆಯಾಗಿ ಬರೆಯುವುದೇನೆಂದರೆ, ಪ್ರವಾದಿ ಮುಹಮ್ಮದ್(ಸ) ಅವರ ಜೀವನದ ಕೊನೆಯ ದಿನಗಳಲ್ಲಿ, ಮುಸಲ್ಮಾ (ಸುಳ್ಳುಗಾರ) ಎಂಬ ವ್ಯಕ್ತಿ ಪ್ರವಾದಿತ್ವವನ್ನು ಘೋಷಿಸಿದನು ಮತ್ತು ಪ್ರವಾದಿ ಮುಹಮ್ಮದ್(ಸ) ಅವರ ಮರಣದ ನಂತರ ಅವನು ಇಸ್ಲಾಮಿಕ್ ಸ್ಟೇಟ್ ವಿರುದ್ಧ ಬಂಡಾಯವೆದ್ದನು. ಇತನು ಯಮಾಮ ನಿವಾಸಿಯಾಗಿದ್ದನು. ಅವನ ದಂಗೆಯ ಪರಿಣಾಮವು ಹರಡಲು ಪ್ರಾರಂಭಿಸಿದಾಗ ಮತ್ತು ಅದು ದೇಶದ್ರೋಹಕ್ಕೆ ಕಾರಣವಾದಾಗ, ಹಝ್ರತ್ ಅಬು ಬಕರ್(ರ)ರವರು ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರನ್ನು ಹದಿಮೂರು ಸಾವಿರ (13000) ಮುಸ್ಲಿಮರ ಸೈನ್ಯದೊಂದಿಗೆ ಅವನನ್ನು ಶಕ್ತಿದಮನ ಮಾಡಲು ಕಳುಹಿಸಿದರು. ಮುಸಲ್ಮಾ ಕಝ್ಝಾಬ್ ತನ್ನ ನಲವತ್ತು ಸಾವಿರ (40,000) ಸೈನಿಕರೊಂದಿಗೆ ಖಾಲಿದ್ ಬಿನ್ ವಲೀದ್ ಅವರ ಸೈನ್ಯದೊಂದಿಗೆ ಹೋರಾಡಿದನು ಹೀಗೆ ಎರಡು ಕಡೆಯ ನಡುವೆ ಭೀಕರ ಯುದ್ಧವು ನಡೆಯಿತು, ಇದರಲ್ಲಿ ಅನೇಕ ಸಹಚರರು ಶಹೀದ್ ಆದರು. ಈ ಸಹಚರರಲ್ಲಿ ಅನೇಕ ಪವಿತ್ರ ಖುರ್‌ಆನಿನ ಹಾಫಿಝ್‌ಗಳು ಹಾಗೂ ಖಾರಿಗಳೂ ಇದ್ದರು. ಬುಖಾರಿಯಲ್ಲಿ ಒಂದು ವರದಿ ಹೀಗಿದೆ: ಹಝ್ರತ್ ಝೈದ್ ಬಿನ್ ಸಾಬಿತ್(ರ) ವರದಿ ಮಾಡುತ್ತಾರೆ, ಈ ಘಟನೆಯ ನಂತರ ಹಝ್ರತ್ ಅಬು ಬಕರ್(ರ) ಅವರು ನನ್ನನ್ನು ತಮ್ಮ ಬಳಿಗೆ ಕರೆದರು. ಆ ಸಮಯದಲ್ಲಿ ಹಝ್ರತ್ ಉಮರ್ ಬಿನ್ ಅಲ್-ಖತ್ತಾಬ್(ರ) ಕೂಡ ನಿಮ್ಮ ಜೊತೆಗಿದ್ದರು. ಹಝ್ರತ್ ಅಬು ಬಕರ್(ರ) ನನ್ನನ್ನು ಉದ್ದೇಶಿಸಿ ಅಂದರೆ ಝೈದ್ ಬಿನ್ ಸಾಬಿತ್ ಅವರನ್ನು ಹೇಳಿದರು: ಹಝ್ರತ್ ಉಮರ್(ರ) ನನ್ನ ಬಳಿಗೆ ಬಂದು ಬಂದು ಯಮಾಮಾ ಯುದ್ಧದಲ್ಲಿ ಅನೇಕ ಖುರ್‌ಆನ್ ಕಂಠಪಾಠಿಗಳು(ಹಾಫಿಝ್ ಖುರ್‌ಆನ್) ಶಹೀದ್ ಆಗಿದ್ದಾರೆ ಅದೇ ರೀತಿ ಅನೇಕ ಸ್ಥಳಗಳಲ್ಲಿ ಪವಿತ್ರ ಖುರ್‌ಆನ್‌ನ ಪುರಾತನ ಕಂಠಪಾಠಿಗಳು ಹಾಗೂ ಖಾರಿಗಳು ಶಹೀದ್ ಆಗುತ್ತಿದ್ದಾರೆ ಮತ್ತು ಮರಣ ಹೊಂದುತ್ತಲೇ ಹೋಗುತ್ತಿದ್ದಾರೆ ಎಂದು ಹೇಳಿದರು. ಆದ್ದರಿಂದ, ಪವಿತ್ರ ಖುರ್‌ಆನ್‌ನನ್ನು ಸಂಕಲನಗೊಳಿಸಲು ಆದೇಶಿಸಲು ನಾನು ನಿಮ್ಮನ್ನು ವಿನಂತಿಸುತ್ತೇನೆ. ಅದಕ್ಕೆ ನಾನು ಹಝ್ರತ್ ಉಮರ್(ರ) ಅವರನ್ನು ನಾನು ರಸೂಲ್(ಸ) ಮಾಡದೇ ಇರುವ ಕಾರ್ಯವನ್ನು ನಾನು ಹೇಗೆ ಮಾಡಲಿ? ಎಂದು ಉತ್ತರಿಸಿದೆ. ಹಝ್ರತ್ ಊಮರ್(ರ) ಹೇಳಿದರು: ಅಲ್ಲಾಹನ ಆಣೆ, ಆದರೂ ಇದು ಒಳ್ಳೆಯ ಕಾರ್ಯವಾಗಿದೆ, ಹಝ್ರತ್ ಉಮರ್(ರ)ರವರು ಇದರ ಬಗ್ಗೆ ಮತ್ತೆ ಮತ್ತೆ ಹೇಳುತ್ತಿದ್ದರು. ತದನಂತರ ಅಲ್ಲಾಹನು ನನ್ನ ಮನಸ್ಸನ್ನು ತೆರೆದನು. ಹಝ್ರತ್ ಅಬು ಬಕರ್(ರ)ರವರ ಈ ಮಾತುಗಳು ಗಮನಾರ್ಹವಾಗಿದೆ.

**ಹತ್ತಾ ಶರಹಲ್ಲಾಹು ಸದ್‌ರಿ ಲಿಝಾಲಿಕ** (ಬುಖಾರಿ ಕಿತಾಬ್ ಅಲ್-ತಫ್ಸಿರ್ ಬಾಬ್ ಜುಮಾ ಅಲ್-ಕುರಾನ್) ಅಂದರೆ ಅಲ್ಲಾಹನು ಪವಿತ್ರ

*(ಪುಟ ಸಂಖ್ಯೆ-10 ರಲ್ಲಿ ಮುಂದುವರಿಸಲಾಗಿದೆ)*

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 25 November 2021, Issue No. 47

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 46ರ ವರದಿಯ ಉಳಿದ ಭಾಗ)**

ಅವರು ಹೇಳಿದರು. ಜರ್ಮನಿಯಲ್ಲಿ ಅಹ್ಮದಿಯಾ ಜಮಾಅತಿನ ಪರಿಚಯವು ತುಂಬಾ ಪಕ್ವಗೊಂಡಿದೆ ಅದರಿಂದ ನಾನು ತುಂಬಾ ಪ್ರಭಾವಿತನಾಗಿದ್ದೇನೆ. ಜರ್ಮನ್ ಸರಕಾರವು ಅಹ್ಮದಿಯಾ ಜಮಾಅತಿಗೆ ತುಂಬ ಗೌರವದಿಂದ ನೋಡುತ್ತಿದೆ. ಆಗ ಹುಝೂರ್ ಹೇಳಿದರು. ವಾಸ್ತವವೇನೆಂದರೆ ಅಹ್ಮದಿಯಾ ಜಮಾಅತ್ ಇಸ್ಲಾಮಿನ ಶಿಕ್ಷಣ ಪ್ರಸ್ತುತಪಡಿಸುತ್ತದೆ. ಆ ಕಾರಣದಿಂದ ಜಮಾಅತ್ ಗೌರವಿಸಲ್ಪಡುತ್ತದೆ. ಎಲ್ಲಿಯೇ ಆಗಲಿ ಇಸ್ಲಾಮಿನ ನಿಜವಾದ ರೂಪ ಪ್ರದರ್ಶಿಸಿದರೆ, ಜನರ ಮೇಲೆ ಹಿಡಿತದ ಪರಿಣಾಮವೇ ಕಾಣಬಹುದಾಗಿದೆ. ಆದರೆ ಉಗ್ರವಾದದ ಮೂಲಕ ಇಸ್ಲಾಂ ಪ್ರಚಾರ ಮಾಡಿದರೆ ಅದರ ಪರಿಣಾಮ ಕೆಟ್ಟದ್ದೇ ಕಾಣಬಹುದು.

ಹುಝೂರ್ ಅನ್ವರ್ (ಅಬಿಅ) ಹೇಳಿದರು. ನಿಮ್ಮ ಆರೋಗ್ಯ ದೀರ್ಘಾಯುಷ್ಯಕ್ಕಾಗಿ ಪ್ರಾರ್ಥಿಸುತ್ತೇನೆ. ಅಲ್ಲಾಹನು ನಿಮಗೆ ಆರೋಗ್ಯ ಮತ್ತು ನಿಷ್ಠೆಯಿಂದ ಜಮಾಅತಿನ ಸೇವೆ ಮಾಡುವ ಭಾಗ್ಯ ದೊರೆಯಲಿ. ವಿಜಯಕ್ಕಾಗಿ ನಿಮ್ಮ ಪ್ರಾರ್ಥನೆಗಳ ಅವಶ್ಯಕತೆ ಇದೆ. ಅಲ್ಲಾಹನ ನೆರವು ನಿಮ್ಮೊಂದಿಗಿರಲಿ, ನಿಮಗಾಗಿ ಇನ್ನೂ ಅಧಿಕ ಮಾರ್ಗಗಳು ತೆರೆಯಲ್ಪಡಲಿ. ಕೊನೆಯಲ್ಲಿ ಅವರು ಹೇಳಿದರು. ನಾನು ನನ್ನನ್ನು ಅಹ್ಮದಿ ಎಂದೇ ಪರಿಗಣಿಸುತ್ತೇನೆ.

* ಮೋನ್‌ಟೆನೀಗರ್‌ನ ತಂಡದೊಂದಿಗೆ ಹುಝೂರ್(ಅತಬಿಅ)ರ ಈ ಭೇಟಿ ಮಧ್ಯಾಹ್ನ ಒಂದು ಗಂಟೆಗೆ ಮುಕ್ತಾಯಗೊಂಡಿತು. ಭೇಟಿಯ ಕೊನೆಯಲ್ಲಿ ಸದಸ್ಯರೆಲ್ಲರೂ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

**ಮಾಸ್ಟರ್ ಅಬ್ದುಲ್ ಖುದ್ದೂಸ್ ಸಾಹಿಬ್ ಶಹೀದ್ ಕುಟುಂಬದವರ ಭೇಟಿ ಹುಝೂರ್(ಅತಬಿಅ)ರೊಡನೆ.**

* ವಿವಿಧ ಗುಂಪಿನವರೊಂದಿಗೆ ಭೇಟಿ ಮತ್ತು ಸಭೆಗಳ ನಂತರ ಕಾರ್ಯಕ್ರಮದನ್ವಯ ಹುಝೂರ್ ತಮ್ಮ ಕಚೇರಿಗೆ ಆಗಮಿಸಿ ಮು. ಮಾಸ್ಟರ್ ಅಬ್ದುಲ್ ಖುದ್ದೂಸ್ ಸಾಹಿಬ್ ಶಹೀದ್ ಕುಟುಂಬದವರನ್ನು ಭೇಟಿಯಾದರು.

ಮಾಸ್ಟರ್ ಅಬ್ದುಲ್ ಖುದ್ದೂಸ್ ಸಾಹಿಬ್ ಶಹೀದ್, ಪೋಲೀಸರ ಅತ್ಯಂತ ಬರ್ಬರ ಹಿಂಸೆಯ ಪರಿಣಾಮವಾಗಿ 30 ಮಾರ್ಚ್ 2012 ರಂದು ಶಹಾದತಿನ ದರ್ಜೆ ಪಡೆದರು. ದಿವಂಗತ ಶಹೀದರು ಸರಕಾರಿ ಪ್ರಾಥಮಿಕ ಶಾಲೆ ರಬ್ವಾದ ಶಿಕ್ಷಕರಾಗಿದ್ದರು. ಪೋಲೀಸರು ಒಂದು ಸುಳ್ಳು ಮೊಕದ್ದೊಮೆ ಹೂಡಿ ಅವರನ್ನು ಬಂಧಿಸಿದ್ದರು ಮತ್ತು ಅವರನ್ನು ಅತ್ಯಂತ ಬರ್ಬರ ರೀತಿಯಲ್ಲಿ ಹಿಂಸಿಸಿದರು. ಅದನ್ನು ತಾಳಲಾರದೆ ಅಲ್ಲಾಹನ ಆಸ್ಥನದಲ್ಲಿ ಹಾಜರಾದರು.

**ವಿಭಿನ್ನ ದೇಶಗಳಿಂದ ಆಗಮಿಸಿದ ಮುಬಲ್ಲಿಗೀನ್ ಅವರೊಂದಿಗೆ ಹುಝೂರ್(ಅತಬಿಅ) ರವರ ಭೇಟಿ**

ಹುಝೂರ್ ವಿವಿಧ ದೇಶಗಳಾದ ಮಾಲೆ, ನಾಯಜರ್, ಬ್ರಾಝೀಲ್, ತಾತಾರಿಸ್ತಾನ, ಲಿಥ್ವಾನಿಯಾ ಮತ್ತು ತಾಜಕಸ್ತಾನ್‌ದಿಂದ ಆಗಮಿಸಿದ ಮುಬಲ್ಲಿಗರನ್ನು ಭೇಟಿ ಮಾಡಿದರು. ಅವರ ಕೆಲಸ ಕಾರ್ಯಗಳನ್ನು ಪರಿಶಿಲಿಸಿ ನಿರ್ದೇಶನಗಳನ್ನು ನೀಡಿದರು. ಮತ್ತು ವಿವಿಧ ಕಾರ್ಯಗಳ ಬಗ್ಗೆ ಮಾರ್ಗದರ್ಶನ ನೀಡಿದರು.

ಕೊನೆಯಲ್ಲಿ ಎಲ್ಲಾ ಮುಬಲ್ಲಿಗರು ತಮ್ಮ ಪ್ರೀತಿಯ ನೇತಾರರೊಂದಿಗೆ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

ಅನಂತರ ಹುಝೂರ್(ಅತಬಿಅ) ಮಸ್ಜಿದ್ ಆಗಮಿಸಿ ಝುಹರ್ ಮತ್ತು ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು.

**ವಿವಾಹ ಘೋಷಣೆಗಳು**

* ನಮಾಝ್ ನಿರ್ವಹಣೆಯ ನಂತರ ಕಾರ್ಯಕ್ರಮದನ್ವಯ ಹುಝೂರ್(ಅತಬಿಅ) 7 ವಿವಾಹಗಳ ಘೋಷಣೆ ನೆರವೇರಿಸಿಕೊಟ್ಟರು.

ತಶಹುದ್, ತವೂಝ್ ಮತ್ತು ಖುತುಬಾ ನಿಕಾಹ್‌ನ ನಿಗದಿತ ವಚನಗಳನ್ನು ಪಠಿಸಿದ ನಂತರ ಹುಝೂರ್(ಅತಬಿಅ) ಹೇಳಿದರು. ಈ ಸಮಯ ನಾನು ಕೆಲ ವಿವಾಹಗಳ ಘೋಷಣೆ ನೆರವೇರಿಸುವೆನು. ನಿಕಾಹ, ವಿವಾಹ ಸಂತೋಷದ ಸಂದರ್ಭಗಳಾಗಿವೆ. ಹುಡುಗರಿಗೂ ಹಾಗೂ ಹುಡುಗಿಯರಿಗೂ ಎರಡು ಕುಟುಂಬದವರಿಗೆ ಮತ್ತು ಅವರ ಸಂಬಂಧಿಕರಿಗೂ. ಆದರೆ ಈ ಸಂತೋಷದ ವಾಸ್ತವ ಪ್ರಕಟವಾಗುವುದು ಅಥವಾ ಲಾಭಾನ್ವಿತರಾಗುವುದು, ಈ ಸಂತೋಷದ ಸಂದರ್ಭದಲ್ಲಿಯೂ ಅಲ್ಲಾಹನನ್ನು ಸ್ಮರಿಸುತ್ತಾ ಅವನ ಆಜ್ಞೆಗಳನ್ನು ಪಾಲಿಸುವಾಗ ಮಾತ್ರ,

ಹುಝೂರ್(ಅತಬಿಅ) ಹೇಳಿದರು. ಅಲ್ಲಾಹನು ಪದೇ ಪದೇ ಉಪದೇಶ ಮಾಡಿದ್ದು ಈ ವಚನಗಳು ಪಠಿಸಿದ್ದರ ತಾತ್ಪರ್ಯ ಭಯಭಕ್ತಿಯಿದ್ದರೆ ಮಾತ್ರ ಸಂಬಂಧಿಕರೊಡನೆ ಒಳ್ಳೆಯ ಸ್ನೇಹ ಸ್ಥಾಪಿಸಬಹುದು. ಪರಸ್ಪರ ಭರವಸೆ ಆಶಯಗಳಿಗೆ ಶಕ್ತಿ ನೀಡಬಹುದು.

ಹುಝೂರ್(ಅತಬಿಅ) ಹೇಳಿದರು. ಹುಡುಗಿ ಹುಡುಗ ನಡುವೆ ನಂಬಿಕೆ ಇಲ್ಲದಿದ್ದರೆ ಸಂಬಂಧ ಸ್ಥಿರವಾಗಿರಲು ಸಾಧ್ಯವಿಲ್ಲ. ಯಾರು ನಾವು ಪರಿಶುದ್ಧರು ಎಂದು ಭಾವಿಸುವುದು ಬೇಡ. ನ್ಯೂನತೆಗಳು,

ದುರ್ಬಲತೆಗಳು ಎಲ್ಲರಲ್ಲಿರುತ್ತವೆ. ಆದುದರಿಂದ ನನ್ನ ಈ ನ್ಯೂನತೆ ಜಾಹಿರಾದರೆ ನಮ್ಮ ಸಂಬಂಧ ಮುರಿದು ಹೋಗುವುದು ಎಂದು ಭಾವಿಸುವುದು ಸರಿಯಲ್ಲ. ಸಂಬಂಧ ಸ್ಥಾಪಿಸಲು ಸತ್ಯ ಹೇಳುವ ಆಜ್ಞೆ ಇದೆ. ಆದುದರಿಂದ ಸತ್ಯ ಹೇಳುವ ಪ್ರಯುಕ್ತ, ಸಂಬಂಧ ಏರ್ಪಡಿಸುವ ಸಮಯ ಮತ್ತು ನಂತರವೂ ಸಹ ಯಾವುದೇ ನ್ಯೂನತೆ, ದುರ್ಬಲತೆ ಅಥವಾ ತಪ್ಪು ಆದರೆ ನಂಬಿಕೆ ಹುಟ್ಟಿಸಿ, ಸತ್ಯದ ಮೇಲೆ ನಡೆದುಕೊಳ್ಳುತ್ತಾ ಪರಸ್ಪರ ತಮ್ಮ ತಪ್ಪುಗಳನ್ನು ಹೇಳಿಕೊಳ್ಳಬೇಕು. ಸಹಿಷ್ಣುತೆಯ ಗುಣ ಉಭಯೇತ್ರರಿಗೂ ಇರಬೇಕು. ಸಹನೆ ತೋರಬೇಕು ಮತ್ತು ಕ್ಷಮಿಸಬೇಕು. ಇದಾವುದು ಸಂಬಂಧದಲ್ಲಿ ಕೇವಲ ನಂಬಿಕೆ ಹುಟ್ಟುವುದಿಲ್ಲ ಬದಲು ಪ್ರೀತಿ ಸ್ನೇಹ ಇನ್ನಷ್ಟು ವೃದ್ಧಿಯಾಗುತ್ತದೆ. ಸಂಬಂಧಗಳು ದೃಢವಾಗುತ್ತವೆ.

ಹುಝೂರ್(ಅತಬಿಅ) ನುಡಿದರು. ನಾನು ಇಲ್ಲಿ ಬಂದಾಗಲೆಲ್ಲ ಜನರು ನಿಕಾಹ್ ನೆರವೇರಿಸಲು ಆಗ್ರಹಪಡಿಸುತ್ತಾರೆ. ಆದರೆ ನಿಕಾಹ್ ಆದ ಕೆಲವೇ ತಿಂಗಳುಗಳಲ್ಲಿ ಸಂಬಂಧಗಳು ಹದಗೆಡುತ್ತವೆ. ಆದುದರಿಂದ ನನ್ನಿಂದ ನಿಕಾಹ್ ನೆರವೇರಿಸಿಕೊಳ್ಳುವುದು ಮುಖ್ಯವಲ್ಲ. ಅಲ್ಲಾಹನ ಆಜ್ಞೆಗಳ ಅನುಸಾರ ನಡೆದು ಸಂಬಂಧಗಳನ್ನು ಬಲಪಡಿಸುವುದು ಮುಖ್ಯವಾಗಿದೆ. ಕೇವಲ ಶಕ್ತಿ ಅಷ್ಟೇ ಅಲ್ಲ. ನಿಮ್ಮ ಮುಂದಿನ ಪೀಳಿಗೆಯ ಬಗ್ಗೆಯೂ ಯೋಚಿಸಿರಿ, ಅಂತಿಮ ವಚನದಲ್ಲಿ ಗಮನ ಸೆಳೆಯಲಾಗಿದೆ. ನೀವು ನಿಮ್ಮ ಸತ್ಕರ್ಮಗಳನ್ನು ಉತ್ತಮ ರೀತಿಯಲಿ ಪಾಲಿಸುವ ಜೊತೆಯಲ್ಲಿ, ಹಿತವನ್ನು ಬಯಸುವ ಜೊತೆಯಲ್ಲಿ ಪರಲೋಕದ ಬಗ್ಗೆಯೂ ಚಿಂತಿಸಿರಿ. ಅಲ್ಲಿ ನಿಮ್ಮ ಸಂತಾನ, ನಿಮ್ಮ ಭವಿಷ್ಯವಾಗಿದೆ. ಅದು ನಿಮ್ಮ ನಾಳೆಯಾಗಿದೆ. ಅದರ ಬಗ್ಗೆಯೂ ಚಿಂತಿಸಿರಿ, ಅವರನ್ನು ಉತ್ತಮ ರೀತಿಯಲ್ಲಿ ತರಬೇತುಗೊಳಿಸಿರಿ. ಸ್ವಯಂ ನಾವು ಭಯಭಕ್ತಿಯುಳ್ಳವರಾದರೆ, ದಾಂಪತ್ಯ ಜೀವನವನ್ನು ಸುಂದರಗೊಳಿಸುವುದಾದರೆ, ಅದೇ ರೀತಿ ತಮ್ಮ ಸಂಬಂಧಿಕರ ಹಕ್ಕುಗಳನ್ನು ಪಾಲಿಸುವವರಾದರೆ, ತರಬೇತುಗೊಳಿಸಲು ಸಾಧ್ಯ. ಅಲ್ಲಾಹನು ಇಂದು ಸ್ಥಾಪನೆಯಾಗುತ್ತಿರುವ ಸಂಬಂಧಿಕರಿಗೆ ಈ ವಿಷಯಗಳ ಮೇಲೆ ನಡೆದುಕೊಳ್ಳುವ ಭಾಗ್ಯ ದಯಪಾಲಿಸಲಿ. ಇದಾದ ನಂತರ ನಾನು ನಿಕಾಹಗಳ ಘೋಷಣೆ ಮಢುತ್ತೇನೆ. **(ಮುಂದುವರಿಯುವುದು)**

"ಬದರ್" ವಾರಪತ್ರಿಕೆಯ ಚಂದಾದಾರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.
ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE : 1800–103–2131**
ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ
(ಶುಕ್ರವಾರ ರಜೆ)

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.